# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮಾರ್ಚ್ 16, 2022

ಸಂಪುಟ : 48 ಸಂಚಿಕೆ : 305 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com







## ದುಗ್ಗಮ್ಮನ ಜಾತ್ರೆಗೆ ಬಂದ ಜನ ಸಾಗರ

### ಮಧ್ಯರಾತ್ರಿಯಿಂದಲೇ ಮೈಲುದ್ದದ ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದ ಭಕ್ತರು

ಉತ್ತಂಗಿ ಕೊಟ್ರೇಶ್



ದಾವಣಗೆರೆ,ಮಾ.15- ಎಡೆಜಾತ್ರೆಯ ದಿನವಾದ ಇಂದು ಮಂಗಳವಾರ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ಭಕ್ತಿಯಿಂದ ಆಗಮಿಸಿ ಅಮ್ಮನ ದರ್ಶನ ಪಡೆದು ಧನ್ಯತಾಭಾವ ಹೊಂದಿದರು.

ನಿನ್ನೆ ಮಧ್ಯರಾತ್ರಿಯಿಂದಲೇ ಮೈಲುದ್ದದ ಸರತಿ ಸಾಲಿನಲ್ಲಿ ನಿಂತು ಅಮ್ಮನಿಗೆ ಹೂವು, ಹಣ್ಣು- ಕಾಯಿ, ಉಡಕ್ಕಿ, ಕಣ, ಅಕ್ಕಿ-ಬೆಲ್ಲ, ಬಳೆ ಮತ್ತು ಹರಕೆಯ ಕಾಣಿಕೆಯನ್ನು ಒಪ್ಪಿಸಿದರು. ಹೋಳಿಗೆ, ಅನ್ನ ಮೊಸರಿನ ಎಡೆಯನ್ನು ತಂದು ನೈವೇದ್ಯ ಮಾಡಿದರು.

ಕಳಸ ಮತ್ತು ವಾದ್ಯಗಳೊಂದಿಗೆ ಅಮ್ಮನಿಗೆ ಜೈಕಾರ ಹಾಕುತ್ತಾ ಎಲ್ಲೆಡೆಯಿಂದ ದಂಡು-ದಂಡಾಗಿ ಆಗಮಿಸಿದ ಭಕ್ತರು ಗುಡಿಯ ಸುತ್ತ ಬೇವಿನ ಉಡುಗೆ, ಉರುಳು ಸೇವೆ ಮತ್ತು ದೀಡು ನಮಸ್ಕಾರ ಮೂಲಕ ಪ್ರದಕ್ಷಿಣೆ ಹಾಕಿ ಕಟ್ಟಿಕೊಂಡ ಹರಕೆಗಳನ್ನು ತೀರಿಸಿದರು. ದೇವಸ್ಥಾನದ ಸುತ್ತ ಮರಳನ್ನು ಹಾಕಿ ಉರುಳು ಸೇವೆ ಮತ್ತು ದೀಡು ನಮಸ್ಕಾರ ಹಾಕುವವರಿಗೆ ಅನುಕೂಲ ಕಲ್ಪಿಸಲಾಗಿತ್ತು.



ಅಮ್ಮನ ಗರ್ಭಗುಡಿ ಎದುರಿಗಿರುವ ಪಾದಗಟ್ಟೆ ಆವರಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶವರ್‌ಗಳನ್ನು ಹಾಕಿ, ಸ್ನಾನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಸಂಗ್ರಹವಾಗುವ ಬೇವಿನ ಸೊಪ್ಪು ಮತ್ತು ಬಟ್ಟೆಗಳನ್ನು ತೆಗೆದು ಸ್ವಚ್ಛ ಮಾಡುವಲ್ಲಿ ಪಾಲಿಕೆಯ ಪಡೆಯೊಂದು ನಿರತವಾಗಿತ್ತು. ದೇವಸ್ಥಾನದ ಸುತ್ತ-ಮುತ್ತ ಭಕ್ತಾದಿಗಳು ಭಾರೀ ಸಂಖ್ಯೆಯಲ್ಲಿ ಆಗಮಿಸಿದ್ದರು.

ಯಾವುದೇ ತರಹದ ನೂಕಾಟ, ತಳ್ಳಾಟಗಳಿಲ್ಲದೇ ದೇವತಾ ಸೇವೆಗೆ ಅವಕಾಶವಾಗಿರುವುದು ನೆಮ್ಮದಿ ತರುವ ವಿಚಾರವಾಗಿದೆ ಎಂದು ಭಕ್ತರಲ್ಲೊಬ್ಬರಾದ ಗಂಗಾಧರಪ್ಪ ಹೇಳಿ, ರಕ್ಷಣಾ ವಿಚಾರ ದಲ್ಲಿ ತೃಪ್ತಿ ವ್ಯಕ್ತಪಡಿಸಿದರು.

ದರ್ಶನಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಮೂರು ವಿಧದ ದರ್ಶನಕ್ಕೆ (2ನೇ ಪುಟಕ್ಕೆ)

## ಹಿಜಾಬ್ ಇಸ್ಲಾಂನ ಅತ್ಯಗತ್ಯ ಆಚರಣೆಯಲ್ಲ: ಹೈಕೋರ್ಟ್



ಬೆಂಗಳೂರು, ಮಾ. 15 - ಹಿಜಾಬ್ ಸೇರಿದಂತೆ, ಧಾರ್ಮಿಕ ಸಂಕೇತ ಬಿಂಬಿಸುವ ವಸ್ತ್ರಗಳಿಗೆ ತರಗತಿಯೊಳಗೆ ಅವಕಾಶ ಇಲ್ಲ ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರ ಸಂಹಿತೆಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಆದೇಶವನ್ನು ಎತ್ತಿಹಿಡಿದಿರುವುದಲ್ಲದೆ, ಹಿಜಾಬ್ ಸಮರ್ಥಿಸಿಕೊಂಡು ಸಲ್ಲಿಸಿದ್ದ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿದೆ.

ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ವಾದ-ಪ್ರತಿವಾದ ಆಲಿಸಿ ಹೈಕೋರ್ಟ್ ತೀರ್ಪು ಕಾಯ್ದಿರಿಸಿತ್ತು. ಮುಖ್ಯ ನ್ಯಾಯ ಮೂರ್ತಿ ರಿತುರಾಜ್ ಅವಸ್ಥಿ, ನ್ಯಾಯ ಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಹಾಗೂ ಖಾಜಿ ಜೈಬುನ್ನೀಸಾ ಮೊಹಿಯು ದ್ದೀನ್ ಅವರನ್ನು ಒಳಗೊಂಡ ನ್ಯಾಯಪೀಠ ಮಂಗಳವಾರ ತೀರ್ಪು ಪ್ರಕಟಿಸಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ನಿರ್ಬಂಧಿಸಿರುವ ಕ್ರಮ ಹಾಗೂ ಸರ್ಕಾರ ಸಮವಸ್ತ್ರ ಸಂಹಿತೆ ನಿಗದಿ ಮಾಡಿದ ಆದೇಶ ರದ್ದು ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಾಲಯ ವಜಾಗೊಳಿಸಿದ್ದಲ್ಲದೆ, ನಾಲ್ಕು ಪ್ರಮುಖ ಪ್ರಶ್ನೆಗಳಿಗೆ ಸವಿಸ್ತಾರವಾಗಿ ತೀರ್ಪು ನೀಡಿದೆ.

ವಿವಾದಕ್ಕೆ ಸಂಬಂಧಿಸಿದಂತೆ 11 ದಿನಗಳ ಕಾಲ ವಾದ-ಪ್ರತಿವಾದ ಆಲಿಸಿದ್ದ ನ್ಯಾಯಾಲಯ ಇಂದು ಬೆಳಗ್ಗೆ 8 ನಿಮಿಷಗಳಲ್ಲಿ 129 ಪುಟಗಳ ತೀರ್ಪಿನ (2ನೇ ಪುಟಕ್ಕೆ)

### ಹಿಜಾಬ್ ಕುರಿತು ಹೈಕೋರ್ಟ್ ಆದೇಶದ ಸಂಕ್ಷಿಪ್ತ ವಿವರ

- ಮುಸ್ಲಿಮ್ ಮಹಿಳೆಯರು ಹಿಜಾಬ್ ಧರಿಸುವುದು ಇಸ್ಲಾಂನ ಧಾರ್ಮಿಕ ಅತ್ಯಗತ್ಯ ಪದ್ಧತಿಗಳಲ್ಲಿ ಒಂದಲ್ಲ
- ಹಿಜಾಬ್ ಅತ್ಯಗತ್ಯ ಧಾರ್ಮಿಕ ಪದ್ಧತಿ ಎಂಬುದನ್ನು ತೋರಿಸುವ ಯಾವುದೇ ದಾಖಲೆ ಮಂಡಿಸಿಲ್ಲ
- ಹಿಜಾಬ್ ಧರಿಸದವರು ಪಾಪಿಗಳಾಗುವುದಿಲ್ಲ
- ಶಿಕ್ಷಕರು, ಶಿಕ್ಷಣ ಹಾಗೂ ಸಮವಸ್ತ್ರ ಇಲ್ಲದೇ ಶಿಕ್ಷಣದ ವಿಚಾರ ಪರಿಪೂರ್ಣವಾಗದು
- ಸಮವಸ್ತ್ರವು ಸಂವಿಧಾನದ ವ್ಯಾಪ್ತಿಯಲ್ಲಿ ನೀಡಲಾಗಿರುವ ಸಕಾರಣವಾದ ನಿರ್ಬಂಧ
- ಮೊಘಲರು ಇಲ್ಲವೇ ಬ್ರಿಟಿಷರು ಸಮವಸ್ತ್ರ ಜಾರಿಗೆ ತಂದಿಲ್ಲ. ಗುರುಕುಲದ ದಿನಗಳಿಂದಲೂ ಸಮವಸ್ತ್ರವಿದೆ
- ಸಮವಸ್ತ್ರದ ಬಣ್ಣದ ಹಿಜಾಬ್‌ಗೆ ಅನುಮತಿ ನೀಡಿದರೂ ಅದು ಸಮವಸ್ತ್ರದ ಉಲ್ಲಂಘನೆ.
- ವಿದ್ಯಾರ್ಥಿನಿಯರಲ್ಲಿ ಹಿಜಾಬ್ ಧರಿಸುವವರು, ಧರಿಸದೇ ಇರುವವರು ಎಂಬ ಎರಡು ವಿಭಾಗಗಳಾಗುತ್ತವೆ
- ಪ್ರತ್ಯೇಕತೆಗೆ ಅವಕಾಶ ನೀಡದೇ ಸುರಕ್ಷಿತ ಸ್ಥಳ ರೂಪಿಸುವುದು ಸಮವಸ್ತ್ರದ ಉದ್ದೇಶ
- ವಸ್ತ್ರಸಂಹಿತೆ ಪಾಲಿಸುವುದು (2ನೇ ಪುಟಕ್ಕೆ)

### ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂಗೆ

#### ಹಿಜಾಬ್ ಆತ್ಮಸಾಕ್ಷಿಯ ಹಕ್ಕು ಎಂದು ವಾದ ಮಂಡನೆ

ನವದೆಹಲಿ, ಮಾ. 15 – ಹಿಜಾಬ್ ಇಸ್ಲಾಂನ ಅತ್ಯಗತ್ಯ ಧಾರ್ಮಿಕ ಪದ್ಧತಿ ಅಲ್ಲ. ಸಮವಸ್ತ್ರ ಮೀರಿ ಹಿಜಾಬ್ ಧರಿಸಲು ಅವಕಾಶ ನೀಡಲಾಗದು ಎಂದು ಕರ್ನಾಟಕ ಹೈಕೋರ್ಟ್ ನೀಡಿದ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿದೆ.

ಹೈಕೋರ್ಟ್ ಎದುರು ಅರ್ಜಿ ದಾಖಲಿಸಿದ್ದ ಮುಸ್ಲಿಮ್ ವಿದ್ಯಾರ್ಥಿನಿಯೊಬ್ಬರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ. ಇದಕ್ಕೂ ಮುಂಚೆ ಉಡುಪಿಯ ಸರ್ಕಾರಿ ಬಾಲಕಿಯರ ಪಿ.ಯು. ಕಾಲೇಜಿನ ಕೆಲ ವಿದ್ಯಾರ್ಥಿನಿಯರು ಶಾಲಾ ಕೋಣೆಯಲ್ಲಿ ಹಿಜಾಬ್ ಧರಿಸಲು ಅವಕಾಶ ಕೇಳಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಹೈಕೋರ್ಟ್ ತೀರ್ಪಿನಲ್ಲಿ ಧಾರ್ಮಿಕ ಸ್ವಾತಂತ್ರ್ಯ ಹಾಗೂ (2ನೇ ಪುಟಕ್ಕೆ)

## ವಿವಾದದ ಹಿಂದೆ ಕಾಣದ ಕೈಗಳ ಕೈವಾಡ

ಹಿಜಾಬ್ ವಿಷಯವನ್ನು ದೇಶಾದ್ಯಂತ ವಿವಾದವನ್ನಾಗಿಸಿರುವುದರ ಹಿಂದೆ ಕಾಣದ ಕೈಗಳು ಅಡಗಿವೆ ಎಂಬ ಬಲವಾದ ಸಂಶಯವನ್ನು ಹೈಕೋರ್ಟ್ ವ್ಯಕ್ತಪಡಿಸಿದೆ. ಸಮವಸ್ತ್ರ ಸಂಹಿತೆ ಕುರಿತಂತೆ ಸರ್ಕಾರ ಕಳೆದ ಫೆಬ್ರವರಿ 5ರಂದು ಸುತ್ತೋಲೆ ಹೊರಡಿಸುವುದಕ್ಕೂ ಮುನ್ನವೇ ಉಡುಪಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆರು ವಿದ್ಯಾರ್ಥಿನಿಯರು ಹೈಕೋರ್ಟ್ ಮೆಟ್ಟಿಲೇರಿ ತರಗತಿಯೊಳಗೆ ಹಿಜಾಬ್ ಧರಿಸಲು ಅನುಮತಿ ನೀಡಬೇಕೆಂದು ಕೋರಿದ್ದರು.

ಇದನ್ನು ಗಮನಿಸಿದಾಗ 2021ರ ಡಿಸೆಂಬರ್ ಮೊದಲ ವಾರದಲ್ಲೇ ಈ ಕಾಲೇಜಿನಲ್ಲಿ ಹಿಜಾಬ್ ಕುರಿತಂತೆ ಹುನ್ನಾರ ರೂಪಿಸುವ ಪ್ರಯತ್ನ ನಡೆದಿದೆ ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಬೇರೆ (2ನೇ ಪುಟಕ್ಕೆ)

## ಉ.ಪ್ರದೇಶದಲ್ಲಿ ಬುಲ್ಡೋಜರ್ ಭರಾಟೆ

**ಬುಲ್ಡೋಜರ್ ಪಿಚಕಾರಿ ಬೇಡಿಕೆ ಈಡೇರಿಸಲು ಪರದಾಡುತ್ತಿರುವ ವ್ಯಾಪಾರಿಗಳು**

ಲಖ್ನೌ/ವಾರಣಾಸಿ, ಮಾ. 15 -ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ್ ನೇತೃತ್ವದಲ್ಲಿ ಬಿಜೆಪಿ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ ನಂತರ, ರಾಜ್ಯಾದ್ಯಂತ ಬುಲ್ಡೋಜರ್ ಹವಾ ಎದ್ದಿದೆ.

ವಿಧಾನಸಭಾ ಚುನಾವಣೆಯಲ್ಲಿ ವಿವಿಧ ಪಕ್ಷಗಳ ನಾಯಕರು 'ಬುಲ್ಡೋಜರ್' ಪದ ವನ್ನು ಟೀಕೆ ಹಾಗೂ ಸಮರ್ಥನೆಗಾಗಿ ಬಳಸಿ ದ್ದರು. ಮಾಫಿಯಾಗಳು ಹಾಗೂ ಅಪರಾಧಿಗಳ ಅಕ್ರಮ ಕಟ್ಟಡಗಳನ್ನು ಧ್ವಂಸಗೊಳಿಸಲು ಬುಲ್ಡೋಜರ್ ವ್ಯಾಪಕವಾಗಿ ಬಳಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಆದಿತ್ಯನಾಥ್ ಅವರನ್ನು 'ಬುಲ್ಡೋಜರ್ ಬಾಬಾ' ಎಂದು ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಟೀಕಿಸುತ್ತಿದ್ದರು.

ಇದನ್ನು ಸಕಾರಾತ್ಮಕ ಪ್ರಚಾರಕ್ಕಾಗಿ ಬಳಸಿಕೊಂಡಿದ್ದ ಆದಿತ್ಯನಾಥ್, ತಮ್ಮ ಹಲವು ಭಾಷಣಗಳಲ್ಲಿ ಬುಲ್ಡೋಜರ್ ಪದ ಬಳಸಿ ನಾನು ಗಟ್ಟಿ ನಾಯಕ ಎಂದು ಬಿಂಬಿಸಿಕೊಂಡಿದ್ದರು. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುತ್ತಿದಂತೆ, ಬುಲ್ಡೋಜರ್ (2ನೇ ಪುಟಕ್ಕೆ)

## ನವೀನ್ ಮೃತದೇಹ ಪೋಲ್ಯಾಂಡ್‌ಗೆ ರವಾನೆ



ನವದೆಹಲಿ, ಮಾ. 15 – ಸಮರ ಪೀಡಿತ ಉಕ್ರೇನ್‌ನ ಖಾರ್ಕೀವ್‌ನಲ್ಲಿದ್ದ ನವೀನ್ ಶೇಖರಪ್ಪ ಗ್ಯಾನಗೌಡರ್ ಅವರ ಕಳೇಬರವನ್ನು, ಈಗ ಪೋಲ್ಯಾಂಡ್‌ಗೆ ತರಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಖಾರ್ಕೀವ್‌ನಲ್ಲಿ ಸಂಘರ್ಷ ತೀವ್ರವಾಗಿದೆ. ಈ ಹಿನ್ನೆಲೆಯಲ್ಲಿ ರಕ್ಷಣಾ ಕಾರಣಗಳಿಂದಾಗಿ ಮೃತದೇಹವನ್ನು ಮೊದಲು ವಿನ್ನಿಟ್ಸಿಯ ನಗರಕ್ಕೆ ರವಾನಿಸಲಾಗಿತ್ತು. ಈ ನಗರವು ಖಾರ್ಕೀವ್‌ನಿಂದ ಸುಮಾರು 710 ಕಿ.ಮೀ. ದೂರದಲ್ಲಿದೆ. ನಂತರ ಮೃತದೇಹವನ್ನು ಪೋಲ್ಯಾಂಡ್‌ಗೆ ತೆಗೆದುಕೊಂಡು ಬರಲಾಗಿದೆ.

ಕಳೆದ ಮಾರ್ಚ್ 1ರಂದು ಖಾರ್ಕೀವ್ ನ್ಯಾಷನಲ್ ಮೆಡಿಕಲ್ ಯುನಿವರ್ಸಿಟಿಯಲ್ಲಿ ಅಧ್ಯಯನ ಮಾಡುತ್ತಿದ್ದ ನವೀನ್, ರಷ್ಯಾ ನಡೆಸಿದ ದಾಳಿಗೆ ಸಿಲುಕಿ ಸಾವನ್ನಪ್ಪಿದ್ದರು.

ಮೃತದೇಹವನ್ನು ಪೋಲ್ಯಾಂಡ್ ಮೂಲಕ ಭಾರತಕ್ಕೆ ತರಲು ಅಗತ್ಯ ಔಪಚಾರಿಕತೆ ಪೂರ್ಣಗೊಳಿಸಲಾಗಿದೆ.

ಮೃತದೇಹವನ್ನು ವಾಪಸ್ ತರಲು ಕೇಂದ್ರ ಸರ್ಕಾರ ನಿರಂತರ ಪ್ರಯತ್ನ ನಡೆಸುತ್ತಿದೆ ಎಂದು ವಿದೇಶಾಂಗ ಸಚಿವ ಜೈಶಂಕರ್ ಸಂಸತ್ತಿಗೆ ಮಂಗಳವಾರ ತಿಳಿಸಿದ್ದರು.

## ನಷ್ಟದಲ್ಲಿ 21 ನಿಗಮ, ಮಂಡಳಿಗಳು

ಬೆಂಗಳೂರು, ಮಾ. 15 - ರಾಜ್ಯದಲ್ಲಿರುವ 60 ನಿಗಮ-ಮಂಡಳಿಗಳಲ್ಲಿ 34 ಲಾಭದಲ್ಲಿದ್ದು, 21ನಷ್ಟದಲ್ಲಿವೆ ಎಂದು ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ದಿಮೆಗಳ ಸಚಿವ ಎಂ.ಟಿ.ಬಿ.ನಾಗರಾಜ್ ತಿಳಿಸಿದ್ದಾರೆ. ವಿಧಾನ ಪರಿಷತ್ ನಲ್ಲಿ ಕಾಂಗ್ರೆಸ್ ನ ಕೆ.ಹರೀಶ್ ಕುಮಾರ್ ಪ್ರಶ್ನೆಗೆ (2ನೇ ಪುಟಕ್ಕೆ)

### ಶ್ರೀಮತಿ ವಿಶಾಲಾಕ್ಷಿ ಪಾಟೀಲ್ ನಿಧನ



ದಾವಣಗೆರೆ ನಿವಾಸಿಯಾದ
**ಶ್ರೀಮತಿ ವಿಶಾಲಾಕ್ಷಿ ಪಾಟೀಲ್**
ಅವರು, ದಿನಾಂಕ : 14.03.2022 ರ ಸೋಮವಾರ ಬೆಳಿಗ್ಗೆ 7.00 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 74 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 16.03.2022ರ ಬುಧವಾರ ಮಧ್ಯಾಹ್ನ ಕಶೆಟ್ಟಿಹಳ್ಳಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ ಹಾಗೂ ಬಂಧು-ಮಿತ್ರರು
ಫೋನ್ : 99001 23500, 99019 41668







# ದುಗ್ಗಮ್ಮನ ಜಾತ್ರೆಗೆ ಬಂದ ಜನ ಸಾಗರ



ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್ ದುರ್ಗಾಂಬಿಕಾ ದೇವಿ ದರ್ಶನ ಪಡೆದರು.



ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಪ್ರಯುಕ್ತ ಭಕ್ತರು ಹರಕೆ ತೀರಿಸುತ್ತಿರುವ ದೃಶ್ಯ.

**(1ನೇ ಪುಟದಿಂದ)** ಅವಕಾಶವಿತ್ತು. ಧರ್ಮ ದರ್ಶನ, 50 ರೂ.ಗಳ ಟಿಕೆಟ್ ದರ್ಶನ ಮತ್ತು ಬಹಳ ಮುಖ್ಯವಾದ ವ್ಯಕ್ತಿಗಳಿಗೆ ನೀಡಲಾದ ಗೌರವ ಪಾಸ್ ದರ್ಶನ. ಈ ಮೂರೂ ಕಡೆಯೂ ದೊಡ್ಡ ಸಂಖ್ಯೆಯಲ್ಲಿಯೇ ಜನ ಸೇರಿತ್ತು. ಭಯ-ಭಕ್ತಿಯಿಂದ ಶಾಂತಿ ಯುತವಾಗಿ ಗಂಟೆಗಟ್ಟಲೇ ನಿಂತು ಅಮ್ಮನ ದರ್ಶನ ಪಡೆದರು.

ಪರಸ್ಥಳಗಳಿಂದ ಬಂದು ನೆಂಟರಿಷ್ಟರ ಮನೆಯಲ್ಲಿ ತಂಗಿರುವ ಭಕ್ತಾದಿಗಳೂ ಸಹ ಅಧಿಕ ಸಂಖ್ಯೆಯಲ್ಲಿ ಆಗಮಿಸಿ ದರ್ಶನ ಪಡೆದರು. ಅಮ್ಮನಿಗೆ ಜೈಕಾರ ಹಾಕುತ್ತ, ಉಧೋ ಉಧೋ ಎನ್ನುತ್ತಾ, ಕಾಪಾಡು ತಾಯಿ ದುಗ್ಗಮ್ಮ ಎಂದು ಮೊರೆಹೋಗುವ ದೃಶ್ಯಗಳು ಸಾಮಾನ್ಯವಾಗಿ ಕಂಡು ಬರುತ್ತಿದ್ದವು. ಮಧ್ಯರಾತ್ರಿಯವರೆಗೂ ಅಮ್ಮನ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಸಂಜೆ ಮಹಿಷಾಸುರ ಮರ್ಧಿನಿ ವೇಷಭೂಷಣದ ಉತ್ಸವ ಮೂರ್ತಿಯ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ತಡರಾತ್ರಿವರೆಗೂ ನಡೆಯಿತು. ನಾಳೆ ಬುಧವಾರ ಬೆಳಿಗ್ಗೆ 'ಮಹಾಪೂಜೆ' ನಂತರ ಚರುಗ ಚೆಲ್ಲುವ ಕಾರ್ಯಕ್ರಮವಿದ್ದು, ನಂತರ ಹರಕೆ ಹೊತ್ತ ಭಕ್ತರಿಂದ ಬೇವಿನ ಉಡಿಗೆ, ದೀಡು ನಮಸ್ಕಾರ ಮತ್ತು ಉರುಳು ಸೇವೆಗಳು ಜರುಗುವುದರ ಜೊತೆಗೆ ಕುರಿ, ಕೋಳಿಗಳನ್ನು ಅರ್ಪಿಸಿ ದುರ್ಗಾದೇವತೆಯನ್ನು ಸಂತೃಪ್ತಿಗೊ ಳಿಸುವ 'ಬಲಿ' ಸೇವೆಗಳೂ ನಡೆಯಲಿವೆ.

ಜಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀ ಸರನ್ನು ನಿಯೋಜಿಸಲಾಗಿದ್ದು, ಸೂಕ್ತ ಬಂದೋ ಬಸ್ತ್ ಕಲ್ಪಿಸಲಾಗಿದೆ. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ರಕ್ಷಣಾಧಿಕಾರಿಗಳು ಶಾಂತಿ-ಸುವ್ಯವಸ್ಥೆಯ ಬಗ್ಗೆ ಖುದ್ದು ನಿಗಾವಹಿಸಿರು ವುದಾಗಿ ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದರು.

# ಜಗಳೂರು ಪಟ್ಟಣ ಪಂಚಾಯತ್ 18.11 ಲಕ್ಷ ರೂ.ಗಳ ಉಳಿತಾಯ ಬಜೆಟ್



ಜಗಳೂರು, ಮಾ.15- ಪಟ್ಟಣ ಪಂಚಾಯಿತಿಯ 2022-23ನೇ ಸಾಲಿನ 18,11,760 ರೂ. ಉಳಿತಾಯ ಬಜೆಟ್ಟನ್ನು ಅಧ್ಯಕ್ಷ ಎಸ್.ಸಿದ್ದಪ್ಪ ಮಂಡಿಸಿದರು.

ಪ.ಪಂ. ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಬಜೆಟ್ ಮಂಡಿಸಿ ಮಾತನಾಡಿದ ಅವರು, ಆಸ್ತಿ ತೆರಿಗೆಯಿಂದ ಬರುವ ಒಟ್ಟು ಆದಾಯದ ಸೆಸ್ ಹೊರತು ಪಡಿಸಿ ಬಾಕಿ ಮೊತ್ತ 47.36 ಲಕ್ಷ ಹಾಗೂ ಇತರೆ ಆದಾಯ 11 ಲಕ್ಷ ರೂ. ಸೇರಿದಂತೆ ಒಟ್ಟು 58.36 ಲಕ್ಷ ರೂ.ಗಳಲ್ಲಿ ಶೇ.24.10 ಯೋಜನೆಯ ಪ.ಜಾತಿ ಮತ್ತು ಪ.ಪಂಗಡದವರ ಕಲ್ಯಾಣ ನಿಧಿ, 14.6 ಲಕ್ಷದಲ್ಲಿ ಶೇ.7.25 ಯೋಜನೆಯಡಿ ಅಲ್ಪಸಂಖ್ಯಾತರ ನಿಧಿ, 4.23 ಲಕ್ಷ, ಶೇ.5 ವಿಕಲಚೇತನ ಅಭಿವೃದ್ದಿಗೆ 2.91 ಲಕ್ಷ ರೂ. ಮೀಸಲಿರಿಸಲಾಗಿದೆ ಎಂದು ತಿಳಿಸಿದರು.

ಬಜೆಟ್ ನಲ್ಲಿ ಪಟ್ಟಣದ ರಸ್ತೆ, ಚರಂಡಿ ಅಭಿವೃದ್ಧಿ ವಿದ್ಯುತ್ ದೀಪ ಸೇರಿದಂತೆ ಮೂಲ ಸೌಕರ್ಯಗಳಿಗೆ ಒತ್ತು ನೀಡಲಾಗಿದೆ ಎಂದರು.

ಸ್ವಚ್ಚತಗೆ ಹೆಚ್ಚಿನ ಆದ್ಯತೆ, ತರಕಾರಿ ಮಾರುಕಟ್ಟೆ ಅಭಿವೃದ್ಧಿ, ಎಲ್ಇಡಿ ದೀಪ ಅಳವಡಿಕೆ, ಪ್ರಮುಖ ವೃತ್ತಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಕೆ, ಘನತ್ಯಾಜ್ಯ ಘಟಕದ ಆವರಣದಲ್ಲಿ ಎರೆಹುಳು ಗೊಬ್ಬರ ಘಟಕ ಸ್ಥಾಪನೆಗೆ ಕ್ರಮ ಹಾಗೂ ಪಟ್ಟಣದ ಅಭಿವೃದ್ಧಿಗಾಗಿ ವಿಶೇಷ ಅನುದಾನ ತರಲು ಶಾಸಕರೊಂದಿಗೆ ಮುಖ್ಯ ಮಂತ್ರಿಗಳ ಬಳಿ ಸರ್ವ ಸದಸ್ಯರ ನಿಯೋಗ ತೆರಳುವುದು ಸೇರಿದಂತೆ ಹಲವಾರು ಪ್ರಮುಖ ವಿಷಯ ಗಳಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ.

ಪ.ಪಂ ಉಪಾಧ್ಯಕ್ಷೆ ಮಂಜಮ್ಮ, ಸದಸ್ಯರಾದ ಆರ್.ತಿಪ್ಪೇಸ್ವಾಮಿ, ಲಲಿತ ಶಿವಣ್ಣ, ದೇವರಾಜ್, ಪಾಪಲಿಂಗಪ್ಪ, ಶಕೀಲ್ ಅಹಮ್ಮದ್, ರವಿಕುಮಾರ್, ಲುಕ್ಮಾನ್, ರಮೇಶ್ ರೆಡ್ಡಿ, ನವೀನ್ ಕುಮಾರ್, ನಿರ್ಮಲ ಕುಮಾರಿ, ಸರೋಜಮ್ಮ, ಲೋಕಮ್ಮ, ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ನಾಮನಿರ್ದೇಶಿತ ಸದಸ್ಯರು ಭಾಗವಹಿಸಿದ್ದರು.

# ಹಿಜಾಬ್ ಇಸ್ಲಾಂನ ಅತ್ಯಗತ್ಯ ಆಚರಣೆಯಲ್ಲ

**(1ನೇ ಪುಟದಿಂದ)** ಸಾರಾಂಶವನ್ನು ಪ್ರಕಟಿಸಿತು.

ಈ ಸಂದರ್ಭದಲ್ಲೇ ನ್ಯಾಯಮೂರ್ತಿಗಳ ಪೀಠ, ಹಿಜಾಬ್ ಇಸ್ಲಾಂನ ಅತ್ಯಗತ್ಯ ಧಾರ್ಮಿಕ ಆಚರಣೆ ಅಲ್ಲ. ಇಸ್ಲಾಂನಲ್ಲಿನ ನಂಬಿಕೆಯಂತೆ ಮುಸ್ಲಿಂ ಮಹಿಳೆಯರು ಹಿಜಾಬ್ ಧರಿಸುವುದು ಕಡ್ಡಾಯ ಧಾರ್ಮಿಕ ಆಚರಣೆ ಆಗಿರುವುದಿಲ್ಲ.

ನಮ್ಮ ಅಭಿಪ್ರಾಯದಂತೆ ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರ ನಿಗದಿ ಮಾಡಲು ಸರ್ಕಾರಕ್ಕೆ ಅಧಿಕಾರವಿದೆ, ಕೆಲವೊಂದು ವಿಚಾರಗಳಲ್ಲಿ ನಿರ್ಬಂಧ ವಿಧಿಸಲು ಸರ್ಕಾರಕ್ಕೆ ಸಂವಿಧಾನಾತ್ಮಕ ಹಕ್ಕಿದೆ, ಇದನ್ನು ವಿದ್ಯಾರ್ಥಿಗಳು ಆಕ್ಷೇಪಿಸಬಾರದು.

ಸಮವಸ್ತ್ರ ನಿಗದಿ ಮಾಡುವ ಅಧಿಕಾರ ಸರ್ಕಾರಕ್ಕಿದೆ, ಅದರಂತೆ 2022, ಫೆಬ್ರವರಿ 5ರ ಆದೇಶವನ್ನು ಅಸಿಂಧುಗೊಳಿಸುವ ಯಾವುದೇ ಕಾನೂನಾತ್ಮಕ ಅಂಶಗಳಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಶಿಕ್ಷಣ ಸಂಸ್ಥೆಗಳ ವಿರುದ್ಧ ವಿಚಾರಣೆ ನಡೆಸುವಂತೆ ಹಾಗೂ ಸಮವಸ್ತ್ರ ಸಂಹಿತೆ ಹೇರದಂತೆ ನಿರ್ದೇಶನ ಕೋರಿ ಸಲ್ಲಿಸಲಾಗಿದ್ದ ಮನವಿಯನ್ನು ನ್ಯಾಯಾಲಯ ಪರಿಗಣಿಸಲಾಗದು, ಆದ್ದರಿಂದ ಕಾಲೇಜಿನ ವಿರುದ್ಧ ಯಾವುದೇ ನಿರ್ದೇಶನ ನೀಡುವ ಅಗತ್ಯವಿಲ್ಲ.

ಅರ್ಜಿಯಲ್ಲಿ ಎದುರಾದ ನಾಲ್ಕು ಪ್ರಶ್ನೆಗಳಿಗೂ ಉತ್ತರ ನಕಾರಾತ್ಮಕವಾಗಿ ಕಂಡುಬಂದಿವೆ, ಆದ್ದರಿಂದ ಎಲ್ಲ ಅರ್ಜಿಗಳನ್ನು ವಜಾಗೊಳಿಸುವ ಮೂಲಕ ಪ್ರಕರಣವನ್ನು ಇತ್ಯರ್ಥಪಡಿಸಲಾಗುತ್ತಿದೆ ಎಂದು ಹೈಕೋರ್ಟ್ ತನ್ನ ತೀರ್ಪಿನಲ್ಲಿ ಪ್ರಕಟಿಸಿತು.

ಹಿಜಾಬ್ ನಿರ್ಬಂಧಿಸಿರುವುದು ಅರ್ಜಿದಾರರ ಧಾರ್ಮಿಕ ಮತ್ತು ಖಾಸಗಿತನ ಸ್ವಾತಂತ್ರ್ಯದ ಉಲ್ಲಂಘನೆ ಎಂಬ ವಾದವನ್ನು ತಳ್ಳಿಹಾಕಿದ ನ್ಯಾಯಪೀಠ ಮೇಲು-ಕೀಳು, ಬಡವ-ಶ್ರೀಮಂತ ಎಂಬ ತಾರತಮ್ಯಗಳನ್ನು ತೊರೆದು ವಿದ್ಯಾರ್ಥಿಗಳು ಶಿಕ್ಷಣ ಪಡೆ ಯಲಿ ಎಂಬ ಉದ್ದೇಶದಿಂದಲೇ ಸಮವಸ್ತ್ರ ಸಂಹಿತೆ ತರಲಾಗಿದೆ.

ಧಾರ್ಮಿಕ ಆಚರಣೆ ಬಗ್ಗೆ ಸಂವಿಧಾನದ 25ನೇ ವಿಧಿಯು ರಕ್ಷಣೆಗಳ ಬಗ್ಗೆ ವಿವರಿಸುತ್ತದೆ, ಆದರೆ, ಅತ್ಯಾವಶ್ಯಕ ಧಾರ್ಮಿಕ ಆಚರಣೆ ಬಗ್ಗೆ ಹೇಳಿಲ್ಲ ಎಂದು ಅನೇಕ ಪ್ರಕರಣಗಳ ಬಗ್ಗೆ ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ.

ಕುರಾನ್‌ನಲ್ಲಿ ಅನೇಕ ಪ್ರಕಾರದ ವ್ಯಾಖ್ಯಾನಗಳಿವೆ, ಯಾವ ವ್ಯಾಖ್ಯಾನಗಳನ್ನು ಒಪ್ಪಬೇಕು ಎಂಬ ಪ್ರಶ್ನೆ ಎದುರಾದಾಗ, ಅಬ್ದುಲ್ಲಾ ಯೂಸುಫ್ ಅಲಿ ಅವರು ಭಾಷಾಂತರ ಮಾಡಿರುವ ಕುರಾನ್‌ನಲ್ಲಿ ಎಲ್ಲೂ ಕೂಡಾ ಹಿಜಾಬ್ ಪ್ರಸ್ತಾಪವೇ ಇಲ್ಲ ಎಂಬ ಅಂಶವನ್ನು ಹೈಕೋರ್ಟ್ ತೀರ್ಪಿನಲ್ಲಿ ತಿಳಿಸಿದೆ.

## ಹಿಜಾಬ್ ಕುರಿತು ಹೈಕೋರ್ಟ್ ಆದೇಶದ ಸಂಕ್ಷಿಪ್ತ ವಿವರ

**(1ನೇ ಪುಟದಿಂದ) ವಿದ್ಯಾರ್ಥಿಗಳಿಗೆ ಕಡ್ಡಾಯ**

**ಶಾಂತಿ, ಸೌಹಾರ್ದತೆ, ಕಾನೂನು ವ್ಯವಸ್ಥೆ ಕದಡುವ ಬಟ್ಟೆಗಳನ್ನು ನಿಷೇಧಿಸಲು ಸರ್ಕಾರಕ್ಕೆ ಅಧಿಕಾರವಿದೆ**

**ಹಿಜಾಬ್ ಧರಿಸಿ ಶಾಲೆಗೆ ಬಂದ ವಿದ್ಯಾರ್ಥಿನಿಯರನ್ನು ತಡೆದ ಪ್ರಾಂಶುಪಾಲ ಹಾಗೂ ಶಿಕ್ಷಕರ ವಿರುದ್ಧ ಯಾವುದೇ ಶಿಸ್ತು ತನಿಖೆ ನಡೆಸಲಾಗದು**

## ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂಗೆ

**(1ನೇ ಪುಟದಿಂದ)** ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ಪ್ರತ್ಯೇಕಿಸಲಾಗಿದೆ. ಧರ್ಮವನ್ನು ಪಾಲಿಸುವವರಿಗೆ ಆತ್ಮಸಾಕ್ಷಿಯ ಹಕ್ಕಿಲ್ಲ ಎಂದು ಹೈಕೋರ್ಟ್ ತೀರ್ಪಿನಲ್ಲಿ ಹೇಳಲಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಹಿಜಾಬ್ ಧರಿಸುವುದು ಸಂವಿಧಾನದ 21ನೇ ವಿಧಿಯ ಅನ್ವಯ ನೀಡಲಾಗಿರುವ ಖಾಸಗಿತನದ ಹಕ್ಕು ವ್ಯಾಪ್ತಿಗೆ ಬರುತ್ತದೆ. ಆತ್ಮಸಾಕ್ಷಿಯ ಸ್ವಾತಂತ್ರ್ಯವು ಖಾಸಗಿತನದ ಹಕ್ಕು ವ್ಯಾಪ್ತಿಗೆ ಬರುತ್ತದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಸಮವಸ್ತ್ರದ ಕುರಿತು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶಗಳು ಮೂಲಭೂತ ಹಕ್ಕುಗಳ ಉಲ್ಲಂಘನೆ. 1983ರ ಕರ್ನಾಟಕ ಶಿಕ್ಷಣ ಕಾಯ್ದೆಯಲ್ಲಿ ಸಮವಸ್ತ್ರದ ಯಾವುದೇ ಉಲ್ಲೇಖ ಇಲ್ಲ ಎಂದು ಅರ್ಜಿದಾರರು ಹೇಳಿದ್ದಾರೆ.

ಸಮವಸ್ತ್ರ ಧರಿಸದ ವಿದ್ಯಾರ್ಥಿಗಳಿಗೆ ಯಾವುದೇ ಶಿಕ್ಷೆ ನೀಡಬೇಕೆಂಬ ಬಗ್ಗೆ ಕಾನೂನಿನಲ್ಲಿ ತಿಳಿಸಲಾಗಿಲ್ಲ. ಸಮವಸ್ತ್ರ ಧರಿಸದೇ ಇದ್ದರೂ ಶಿಕ್ಷೆ ವಿಧಿಸಬೇಕೆಂದು ತಿಳಿಸಲಾಗಿಲ್ಲ ಎಂದು ಅರ್ಜಿದಾರರು ಹೇಳಿದ್ದಾರೆ. ಹಿಜಾಬ್ ಧರಿಸುವುದು ಸಂವಿಧಾನದ 19 (1)(ಎ) ಅನ್ವಯ ಅಭಿವ್ಯಕ್ತಿ ಸ್ವಾತಂತ್ರ್ಯದ ವ್ಯಾಪ್ತಿಗೆ ಬರುತ್ತದೆ. ಆತ್ಮಸಾಕ್ಷಿಯ ಹಕ್ಕಿನ ಅನ್ವಯ ಸಂವಿಧಾನದ 25ನೇ ವಿಧಿಯಡಿ ಹಿಜಾಬ್ ಧರಿಸುವ ಹಕ್ಕಿದೆ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

ಹಿಜಾಬ್ ಧರಿಸುವುದು ವ್ಯಕ್ತಿಗತ ಹಕ್ಕಿನ ಅನ್ವಯ ಆತ್ಮಸಾಕ್ಷಿಯ ಭಾಗ. ಹೀಗಾಗಿ ಈ ವಿಷಯ ಧಾರ್ಮಿಕ ಪದ್ಧತಿಯಲ್ಲಿ ಅಗತ್ಯವೇ ಎಂಬುದರ ಆಧಾರದ ಮೇಲೆ ಅಳೆಯಲಾಗದು ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಮೋಟಾರು ವಾಹನ ಕಾಯ್ದೆ 1988ರ ಸೆಕ್ಷನ್ 129 ರನ್ವಯ ಸಿಖ್ಖರು ಪೇಟ ಧರಿಸುವ ಸಲುವಾಗಿ ಹೆಲ್ಮೆಟ್ ಕಡ್ಡಾಯದಿಂದ ವಿನಾಯಿತಿ ನೀಡಲಾಗಿದೆ.

ನಾಗರಿಕ ವಿಮಾನಯಾನ ಸಚಿವಾಲಯದ ನಿಯಮಗಳ ಅನ್ವಯ ವಿಮಾನದಲ್ಲಿ ಕಿರ್ಪಾಣ್ ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗಿದೆ ಎಂದು ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿದೆ.

ಈ ನಡುವೆ, ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದ ಇನ್ನೋರ್ವ ವ್ಯಕ್ತಿ ಸುಪ್ರೀಂ ಕೋರ್ಟ್‌ನಲ್ಲಿ ಕೇವಿಯಟ್ ದಾಖಲಿಸಿದ್ದು, ಹಿಜಾಬ್ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶ ಹೊರಡಿಸುವುದಕ್ಕೆ ಮುಂಚೆ ತಮ್ಮ ವಾದ ಆಲಿಸಬೇಕು ಎಂದು ಕೋರಿದ್ದಾರೆ.

## ವಿವಾದದ ಹಿಂದೆ ಕಾಣದ ಕೈಗಳ ಕೈವಾಡ

**(1ನೇ ಪುಟದಿಂದ)** ವಿದ್ಯಾರ್ಥಿನಿಯರು ಹಿಜಾಬ್ ಕುರಿತಂತೆ ಪ್ರಸ್ತಾಪ ಮಾಡದಿರುವ ಸನ್ನಿವೇಶದಲ್ಲಿ ಅರ್ಜಿದಾರ ವಿದ್ಯಾರ್ಥಿನಿಯರು ಮಾತ್ರವೇ ಈ ಕುರಿತಂತೆ ವಿವಾದ ಎಬ್ಬಿಸಲು ಮುಂದಾಗಿರುವುದು ಸಂಶಯಕ್ಕೆ ಆಸ್ಪದವಾಗಿದೆ. ಈ ಸಂಶಯದ ಹಿಂದೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಹಾಗೂ ಜಮಾತೆ ಇಸ್ಲಾಂನಂತಹ ಸಂಘಟನೆಗಳ ಕೈವಾಡ ಕಂಡುಬರುತ್ತಿದೆ.

ಈ ಸಂಘಟನೆಗಳ ಮುಖ್ಯಸ್ಥರು ಅರ್ಜಿದಾರ ವಿದ್ಯಾರ್ಥಿನಿಯರ ಕಾಲೇಜಿನ ಪ್ರಾಂಶುಪಾಲರಿಗೆ ಬೆದರಿಕೆ ಹಾಕಿ ದಾಂಧಲೆ ಎಬ್ಬಿಸಿರುವುದನ್ನು ಗಮನಿಸಿದರೆ ಇವೆಲ್ಲಾ ಪೂರ್ವ ನಿಯೋಜಿತ ಕೃತ್ಯ ಎಂಬುದಾಗಿ ವೇದ್ಯವಾಗುತ್ತದೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸ್ ತನಿಖೆ ನಡೆಯುತ್ತಿದ್ದು, ಈ ವಿಷಯದಲ್ಲಿ ಸಂಯಮ ಕಾಯ್ದುಕೊಂಡು ಹೋಗಲು ಪೀಠ ಬಯಸುತ್ತದೆ ಎಂದು ತಿಳಿಸಲಾಗಿದೆ.

# ಉ.ಪ್ರದೇಶದಲ್ಲಿ ಬುಲ್ಡೋಜರ್ ಭರಾಟೆ

**(1ನೇ ಪುಟದಿಂದ)** ಜನ ಸಾಮಾನ್ಯರ ಆಕರ್ಷಣೆ ಪಡೆದುಕೊಂಡಿದೆ. ಆಟಿಕೆಗಳಿಂದ ಹಿಡಿದು ನೀರಿನ ಪಿಚಕಾರಿಗಳವರೆಗೆ, ಕೊನೆಗೆ ಹಚ್ಚೆ ಹಾಕಿಸಿಕೊಳ್ಳುವವರೆಗೂ ಬುಲ್ಡೋಜರ್ ಜನಪ್ರಿಯವಾಗಿದೆ.

ಬುಲ್ಡೋಜರ್ ಪಿಚಕಾರಿಗಳ ಬೇಡಿಕೆ ಈಡೇರಿಸಲು ನಮ್ಮಿಂದ ಸಾಧ್ಯವಾಗುತ್ತಿಲ್ಲ ಎಂದು ವಾರಣಾಸಿಯ ಹರಾರ್ ಸರೈನಲ್ಲಿ ಪಿಚಕಾರಿ ಮಾರುವ ಮೊಹಮ್ಮದ್ ಆಸಿಫ್ ಹೇಳಿದ್ದಾರೆ.

ಈ ಹಿಂದೆ ಶಾರುಕ್ ಖಾನ್ ಹಾಗೂ ಸಲ್ಮಾನ್ ಖಾನ್ ರೀತಿಯ ತಾರೆಗಳ ಚಿತ್ರ ಇರುವ ಪಿಚಕಾರಿಗಳಿಗೆ ಬೇಡಿಕೆ ಇತ್ತು. ಈ ಬಾರಿ ಬುಲ್ಡೋಜರ್ ಪಿಚಕಾರಿ ಬೇಡಿಕೆ ಹೆಚ್ಚಾಗಿದೆ ಎಂದವರು ಹೇಳಿದ್ದಾರೆ.

ಓಕುಳಿ ಹಬ್ಬ ಸಮೀಪಿಸುತ್ತಿರುವಂತೆ ಬುಲ್ಡೋಜರ್ ಪಿಚಕಾರಿಗಳ ಬೇಡಿಕೆ ಅತಿ ಹೆಚ್ಚಾಗಿದೆ ಎಂದು ಇನ್ನೋರ್ವ ವ್ಯಾಪಾರಿ ನೈ ಸರಕ್ ಹೇಳಿದ್ದಾರೆ.

ರಿಮೋಟ್ ಹಾಗೂ ಬ್ಯಾಟರಿ ಚಾಲಿತ ಬುಲ್ಡೋಜರ್ ಆಟಿಕೆಗಳ ಬೇಡಿಕೆ ಅತಿ ಹೆಚ್ಚಾಗಿದೆ ಎಂದು ಲಖ್ನೌದ ಹಳೆ ಭಾಗದ ಆಟಿಕೆ ವ್ಯಾಪಾರಿ ಹರಿಶ್ಚಂದ್ರ ಶ್ರೀವಾಸ್ತವ ಹೇಳಿದ್ದಾರೆ.

ಆದರೆ, ಬುಲ್ಡೋಜರ್ ಆಕರ್ಷಣೆ ಕೇವಲ ಪಿಚಕಾರಿ ಹಾಗೂ ಆಟಿಕೆಗಳಿಗೆ ಸೀಮಿತವಾಗಿಲ್ಲ. ನಿಜವಾದ ಬುಲ್ಡೋಜರ್ ಬಾಡಿಗೆ ದರವೂ ಹೆಚ್ಚಾಗಿದೆ.

ಬಿಜೆಪಿ ಗೆಲುವಿನ ನಂತರ ಹೆಚ್ಚಿನ ಪ್ರಮಾಣದ ಬುಲ್ಡೋಜರ್ ಬೇಡಿಕೆ ಕಂಡು ಬಂದಿದೆ. ರಾಜಕೀಯ ಸಮಾವೇಶಗಳ ಸಮಯದಲ್ಲಿ ಬುಲ್ಡೋಜರ್ ಬೇಡಿಕೆ ಹೆಚ್ಚಾಗಿತ್ತು. ಮತ ಎಣಿಕೆಯ ದಿನವೂ ಬುಲ್ಡೋಜರ್ ಬೇಡಿಕೆ ಅತಿಯಾಗಿತ್ತು.

ಈ ಹಿಂದೆ ಬುಲ್ಡೋಜರ್ ಬಾಡಿಗೆ ಪ್ರತಿ ಗಂಟೆಗೆ 5 ಸಾವಿರ ರೂ. ಆಗಿತ್ತು ಈಗ ಬಾಡಿಗೆ 10 ಸಾವಿರ ರೂ.ಗಳವರೆಗೆ ತಲುಪಿದೆ ಎಂದು ಗುತ್ತಿಗೆದಾರ ವಿನೋದ್ ನಿಶಾದ್ ಹಾಗೂ ಮಯಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ವಾರಣಾಸಿ ಹಾಗೂ ಪ್ರಯಾಗ್‌ರಾಜ್‌ಗಳಲ್ಲಿ ಯುವಕರು ಬುಲ್ಡೋಜರ್ ಹಚ್ಚೆ ಹಾಕಿಸಿಕೊಳ್ಳುತ್ತಿರುವ ದೃಶ್ಯಗಳು ವೈರಲ್ ಆಗಿವೆ.

# ಕರಾಮುವಿನಲ್ಲಿ ಪದವಿ, ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಪ್ರವೇಶ ಪ್ರಾರಂಭ

ದಾವಣಗೆರೆ ಮಾ. 15- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2021-22 ರ ಜನವರಿ ಆವೃತಿಯ ಪ್ರಥಮ ವರ್ಷದ ಬಿಎ, ಬಿಕಾಂ, ಬಿಎಲ್‌ಐಎಸ್‌ಸಿ, ಬಿಬಿಎ, ಬಿಎಸ್‌ಸಿ, ಬಿಸಿಎ, ಎಂ ಎ, ಎಂ ಕಾಂ, ಎಂಬಿಎ, ಎಂಎಲ್ ಐಎಸ್‌ಸಿ, ಎಂಎಸ್‌ಸಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ ಹಾಗೂ ಪಿಜಿ ಡಿಪ್ಲೋಮಾ ಮತ್ತು ಡಿಪ್ಲೋಮಾ ಸರ್ಟಿಫಿಕೇಟ್ ಕೋರ್ಸ್‌ಗಳ ಅಧ್ಯಯನ ವಿಷಯಗಳಿಗೆ ಈಗಾಗಲೇ ಪ್ರವೇಶಾತಿ ಆರಂಭವಾಗಿರುತ್ತದೆ. ಅಲ್ಲದೆ ಬಿ.ಇಡಿ ಶಿಕ್ಷಣ ಕ್ರಮಕ್ಕೆ ಅರ್ಜಿ ಸಲ್ಲಿಸಲು ಇದೇ ದಿನಾಂಕ 27 ಕೊನೆಯ ದಿನವಾಗಿರುತ್ತದೆ.

ಬಿಇಡಿ ಶಿಕ್ಷಣ ಕ್ರಮದ ಸಾಮಾನ್ಯ ಪ್ರವೇಶ ಪರೀಕ್ಷೆ ಏಪ್ರಿಲ್ 3 ರಂದು ನಡೆಯಲಿದೆ. ಆಸಕ್ತ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.ksoumysuru.ac.in ವೀಕ್ಷಿಸಬಹುದು. ಅಥವಾ ಮೊ.ನಂ. 8095939359, 99160 09318, 9008905457 ಕ್ಕೆ ಸಂಪರ್ಕಿಸಬಹುದು ಎಂದು ಕರಾಮುವಿಯ ದಾವಣಗೆರೆ ಪ್ರಾದೇಶಿಕ ನಿರ್ದೇಶಕ ವಿಜಯಪ್ರಕಾಶ್ ತಿಳಿಸಿದ್ದಾರೆ.

# ನಷ್ಟದಲ್ಲಿ 21 ನಿಗಮ, ಮಂಡಳಿಗಳು

**(1ನೇ ಪುಟದಿಂದ)** ಉತ್ತರ ನೀಡಿದ ಸಚಿವರು, ನಷ್ಟದಲ್ಲಿರುವ ನಿಗಮಗಳ ಪೈಕಿ ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕಾವೇರಿ ಹ್ಯಾಂಡ್ ಲೂಮ್ಸ್‌ಗಳನ್ನು ವಿಲೀನಗೊಳಿಸುವಂತೆ ಸಾರ್ವಜನಿಕ ಉದ್ಯಮಗಳ ಸಮಿತಿ ಶಿಫಾರಸ್ಸು ನೀಡಿದೆ. ಈ ಕುರಿತಂತೆ ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ 2022ರ ಜನವರಿ 7ರಂದು ಸಮಿತಿ ರಚಿಸಲಾಗಿದೆ. ಸಾಧಕ ಬಾಧಕಗಳನ್ನು ಪರೀಶೀಲಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.


## ಭಾವಪೂರ್ಣ ಶ್ರದ್ಧಾಂಜಲಿ



ವಿಜಯನಗರ ಸೊಸೈಟಿಯ ಮಾಜಿ ಅಧ್ಯಕ್ಷರೂ ಹಾಗೂ ಹಾಲಿ ನಿರ್ದೇಶಕರಾದ
ಶ್ರೀ ಬಿ. ರಮೇಶ್ (ಪಿಜೆ) ಇವರ ಸಹೋದರರಾದ

**ಶ್ರೀ ಬಿ. ಮೃತ್ಯುಂಜಯ**

ಅವರು ದಿನಾಂಕ 14.03.2022ರಂದು ನಿಧನರಾಗಿದ್ದು, ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು,
ಸಿಬ್ಬಂದಿ ವರ್ಗ, ಪಿಗ್ಮಿ ಸಂಗ್ರಹಕಾರರು ಹಾಗೂ ಸರ್ವ ಸದಸ್ಯರು

**ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,**
'ಶಿವಗೌರಿ', ಮೊದಲನೇ ಮಹಡಿ, ಶ್ರೀ ಭೂತಚೌಡೇಶ್ವರಿ ದೇವಸ್ಥಾನದ ಹತ್ತಿರ,
ರಿಂಗ್ ರಸ್ತೆ, ಶಾಂತಿನಗರ, ದಾವಣಗೆರೆ - 06.


## ನಗರದ ಎಪಿಎಂಸಿಗೆ ಇಂದು ರಜೆ

ನಗರ ದೇವತೆ ದುರ್ಗಾಂಬಿಕಾ ದೇವಿ ಜಾತ್ರೆ ಪ್ರಯುಕ್ತ ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆಗೆ ಇಂದು ರಜೆ ಇರುತ್ತದೆ ಎಂದು ಸಮಿತಿ ಕಾರ್ಯದರ್ಶಿ ತಿಳಿಸಿದ್ದಾರೆ.


## ನಿವೃತ್ತ ಪ್ರಾಂಶುಪಾಲರಾದ ಎನ್.ಹೆಚ್. ರಂಗನಾಥ್ ನಿಧನ



ದಾವಣಗೆರೆಯ ಶಿವಕುಮಾರಸ್ವಾಮಿ ಬಡಾವಣೆ ವಾಸಿ ನಿವೃತ್ತ ಪ್ರಾಂಶುಪಾಲರಾದ **ಎನ್.ಹೆಚ್. ರಂಗನಾಥ್** (67) ಅವರು ದಿನಾಂಕ 14.03.2022ರ ಸೋಮವಾರ ಬೆಳಗಿನ ಜಾವ 3 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.03.2022ರ ಸೋಮವಾರ ಸಂಜೆ ನಗರದ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿತು.

**ಇಂತಿ ದುಃಖತಪ್ತ ಕುಟುಂಬ ವರ್ಗ: ಮೊ: 91642 92323**

## ದ್ವಿತೀಯ ವರ್ಷದ ಚಿರಸ್ಮರಣೆ



**ದಿ|| ಶ್ರೀಮತಿ ಸುಶೀಲಮ್ಮ ಎನ್.ಕೆ.**
(ದಿ|| ಎನ್.ಕೆ. ಚನ್ನವೀರಪ್ಪನವರ ಧರ್ಮಪತ್ನಿ)
ಜನನ : 04-05-1938 ಮರಣ : 16-03-2020

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷವಾಯಿತು. ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ತುಂಬಿದೆ. ನಿಮ್ಮ ಮಾರ್ಗದರ್ಶನವೇ ನಮಗೆ ದಾರಿದೀಪ.

ಎನ್.ಕೆ. ರಾಜೇಂದ್ರ ಮತ್ತು ಸಹೋದರರು
ಹಾಗೂ ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧುಗಳು
ಎನ್.ಕೆ. ಚನ್ನವೀರಪ್ಪ ಮತ್ತು ಮಕ್ಕಳು
ನೀರುಳ್ಳಿ ವ್ಯಾಪಾರಿಗಳು, (94486-66322)
ಸಂಗಮ್ ಏಜೆನ್ಸೀಸ್, ವೀಡಾಲ್ ಲೂಬ್ರಿಕೆಂಟ್ಸ್
ಎಪಿಎಂಸಿ ಯಾರ್ಡ್, ಪಿ.ಬಿ. ರಸ್ತೆ, ದಾವಣಗೆರೆ. (98452-50795)
ಶ್ರೀ ವೀರಭದ್ರೇಶ್ವರ ಟ್ರೇಡರ್ಸ್,
ಈರುಳ್ಳಿ ವ್ಯಾಪಾರಿಗಳು (98452 59395)


# ಸಾಲ ತೀರಿಸಲು ಹಣ ನೀಡದ ಚಿಕ್ಕಮ್ಮನನ್ನು ಕೊಲೆಗೈದ ಆರೋಪಿಗೆ ಜೀವಾವಧಿ ಶಿಕ್ಷೆ

ದಾವಣಗೆರೆ, ಮಾ.15- ಸಾಲ ತೀರಿಸಲು ಹಣ ನೀಡಲಿಲ್ಲ ಎಂಬ ಕಾರಣಕ್ಕೆ ಚಿಕ್ಕಮ್ಮನನ್ನು ಕೊಲೆ ಮಾಡಿದ್ದ ಆರೋಪಿಗೆ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ 35 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ನಗರದ ಜಿ.ಹೆಚ್. ಸಂದೀಪ ಕುಮಾರ ಶಿಕ್ಷೆಗೆ ಗುರಿಯಾದ ವ್ಯಕ್ತಿ. ಇಲ್ಲಿನ ಆರ್‌ಎಂಸಿ ಲಿಂಕ್ ರಸ್ತೆಯ ಟಿಸಿ ಲೇಔಟ್‌ನಲ್ಲಿ ತನ್ನ ಚಿಕ್ಕಮ್ಮ ವಿಶಾಲಾಕ್ಷಿ ಅವರನ್ನು ಕೊಲೆ ಮಾಡಿದ್ದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಲಯವು ವಾದ-ಪ್ರತಿವಾದ ಆಲಿಸಿ ತೀರ್ಪು ಪ್ರಕಟಿಸಿದೆ.

ದುಶ್ಚಟಗಳಿಗೆ ಬಲಿಯಾಗಿ ಸಾಲ ಮಾಡಿಕೊಂಡಿದ್ದ ಸಂದೀಪ, ಸಾಲ ತೀರಿಸಲು ತನ್ನ ಚಿಕ್ಕಮ್ಮ ಹಾಗೂ ಚಿಕ್ಕಪ್ಪನ ಬಳಿ ಹಣಕ್ಕೆ ಬೇಡಿಕೆ ಇಟ್ಟಿದ್ದ. ಹಣ ನೀಡಲು ನಿರಾಕರಿಸಿದ ಅವರು ಬೈದು ಬುದ್ದಿ ಹೇಳಿ ಕಳುಹಿಸಿದ್ದರು. ಬೇರೆಯವರಿಗೆ ಹಣ ಕೊಟ್ಟರೂ ನನಗೆ ಕೊಡುತ್ತಿಲ್ಲ ಎಂಬ ಕೋಪದಿಂದ 2017ರ ಡಿಸೆಂಬರ್ 9 ರಂದು ತನ್ನ ಚಿಕ್ಕಪ್ಪ ಮನೆಯಲ್ಲಿ ಇಲ್ಲದಿರುವುದನ್ನು ಖಾತ್ರಿ ಪಡಿಸಿಕೊಂಡು ಚಿಕ್ಕಮ್ಮ ವಿಶಾಲಾಕ್ಷಿಯನ್ನು ಕೊಲೆಗೈದು ಸಾಕ್ಷಿಗಳ ನಾಶಕ್ಕೆ ಪ್ರಯತ್ನಿಸಿದ್ದನು.

ಪ್ರಕರಣ ದಾಖಲಿಸಿಕೊಂಡ ಆಜಾದ್ ನಗರ ಪೊಲೀಸರು ತನಿಖೆ ಕೈಗೊಂಡಿದ್ದರು. ಆಗಿನ ವೃತ್ತ ನಿರೀಕ್ಷಕ ಜಿ.ಬಿ.ಉಮೇಶ್ ತನಿಖೆ ಕೈಗೊಂಡು, ಆರೋಪಿ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ವಿಚಾರಣೆ ನಡೆಸಿದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎನ್.ಶ್ರೀಪಾದ ಅವರು ಸಂದೀಪನ ವಿರುದ್ಧದ ಅಪರಾಧ ಸಾಬೀತಾಗಿದ್ದರಿಂದ ಆತನಿಗೆ ಜೀವಾವಧಿ ಶಿಕ್ಷೆ ಮತ್ತು 35 ಸಾವಿರ ರೂ. ದಂಡ ವಿಧಿಸಿ, ತೀರ್ಪು ನೀಡಿದ್ದಾರೆ. ಸರ್ಕಾರದ ಪರ ಸರ್ಕಾರಿ ಅಭಿಯೋಜಕ ಕೆ.ಜಿ.ಜಯಪ್ಪ ವಾದ ಮಂಡಿಸಿದ್ದರು.


## ಶ್ರೀಮತಿ ವನಿತ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ಸರ್ಕಲ್ ಹತ್ತಿರದ ವಾಸಿ ಹೆಚ್.ಎಂ. ಉಮಾಪತಯ್ಯ ಅವರ ಧರ್ಮಪತ್ನಿ ಶ್ರೀಮತಿ ವನಿತ (59) ಅವರು ದಿನಾಂಕ : 15.03.2022ರ ಮಂಗಳವಾರ ಮಧ್ಯಾಹ್ನ 12.20ಕ್ಕೆ ನಿಧನರಾದರು. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.03.2022ರ ಮಂಗಳವಾರ ಸಂಜೆ 5.30ಕ್ಕೆ ಹಳೇಬಾತಿ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿತು.


# ಹದಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ

ದಾವಣಗೆರೆ, ಮಾ.15- ತಾಲ್ಲೂಕಿನ ಹದಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಆರ್. ಶಿವಾನಂದಪ್ಪ, ಉಪಾಧ್ಯಕ್ಷರಾಗಿ ಶ್ರೀಮತಿ ಮಂಜುಳಮ್ಮ ಇವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ನಿರ್ದೇಶಕರಾಗಿ ಎಂ.ಡಿ. ನಿಂಗಪ್ಪ, ಟಿ.ಬಿ. ಮಹಾಂತೇಶ್, ಎ.ಡಿ. ಮಹಾಂತೇಶ್, ಶ್ರೀಮತಿ ಚಂದ್ರಮ್ಮ, ಎಂ.ಹೆಚ್. ಕುಬೇರಪ್ಪ, ಎಸ್.ಎ. ರವೀಂದ್ರ, ಕೆ.ಎನ್. ಸುರೇಶ್, ಸಿ.ಎಸ್. ಮಂಜುನಾಥ್, ಎಂ.ಪಿ. ನಾಗರಾಜಪ್ಪ, ಜೆ.ಎನ್. ರವಿಕುಮಾರ್ ಆಯ್ಕೆಗೊಂಡಿದ್ದಾರೆ.

ಈ ಸಂದರ್ಭದಲ್ಲಿ ಚುನಾವಣಾಧಿಕಾರಿ ಜಿ.ಎಸ್. ಸುರೇಂದ್ರ, ಬ್ಯಾಂಕ್ ಪ್ರತಿನಿಧಿ ಎಸ್. ಚನ್ನಬಸಪ್ಪ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಹೆಚ್. ರಾಧಮ್ಮ, ಗುಮಾಸ್ತ ಟಿ.ಮಲ್ಲಪ್ಪ, ಹದಡಿ, ಕನಗೊಂಡನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು ಭಾಗವಹಿಸಿದ್ದರು.

# ಮಹಿಳಾ ಸಾಧನೆಗೆ ಕುಟುಂಬದ ಬೆಂಬಲ ಬೇಕು



## ಸಿದ್ದಗಂಗಾ ಶಾಲೆಯ ಮುಖ್ಯೋಪಾಧ್ಯಾಯಿನಿ ಜಸ್ಟಿನ್ ಡಿಸೌಜ

ದಾವಣಗೆರೆ, ಮಾ. 15 - ಶತಮಾನದ ಹಿಂದೆ ನಾಲ್ಕು ಗೋಡೆಗಳ ಮಧ್ಯೆ ಇದ್ದ ಮಹಿಳೆ, ಈಗ ಸಾಧನೆಯ ಶಿಖರ ಏರುತ್ತಿದ್ದಾಳೆ. ಕುಟುಂಬದವರ ಬೆಂಬಲ ಇದ್ದಾಗ ಇನ್ನಷ್ಟು ಸಾಧನೆ ಸಾಧ್ಯವಾಗುತ್ತದೆ ಎಂದು ಸಿದ್ದಗಂಗಾ ಶಾಲೆಯ ಮುಖ್ಯೋಪಾಧ್ಯಾಯಿನಿ ಜಸ್ಟಿನ್ ಡಿಸೌಜ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಎಂ.ಸಿ.ಸಿ. ಬಿ ಬ್ಲಾಕ್‌ನ ಸ್ನೇಹ ಮಹಿಳಾ ಬಳಗದ ವತಿಯಿಂದ ಹಿರೇಮಠದಲ್ಲಿ ನಿನ್ನೆ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸ್ನೇಹ ಮಹಿಳಾ ಬಳಗದ 9ನೇ ವರ್ಷಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮುಂಚೆ ಮಹಿಳೆಯನ್ನು ಭೋಗದ ವಸ್ತುವಾಗಿ, 4 ಗೋಡೆಗಳ ಮಧ್ಯೆ ಸೀಮಿತವಾಗಿ ನೋಡಲಾಗುತ್ತಿತ್ತು. ರಷ್ಯಾ ಕ್ರಾಂತಿಯ ನಂತರ ಮಹಿಳೆ ಸ್ಥಾನಮಾನಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೋರಾಟ ನಡೆಸಿದ್ದಾಳೆ. ನಂತರ ಮಹಿಳೆಗೆ ಸ್ಥಾನಮಾನಗಳು ಸಿಗಲು ಆರಂಭವಾದವು ಎಂದವರು ಹೇಳಿದರು.

ಮಹಿಳೆ ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು. ಆದರೂ, ಸಾಧನೆ ಮಾಡಲು ಬಯಸಿದಾಗ ಕೆಲವೊಮ್ಮೆ ಸ್ಫೂರ್ತಿ ಸಿಗುವುದಿಲ್ಲ. ಕುಟುಂಬದವರ ಬೆಂಬಲ ಸಿಕ್ಕಾಗ ಹೆಚ್ಚಿನ ಸಾಧನೆ ಸಾಧ್ಯ. ಮಹಿಳೆಯರು ಆತ್ಮಬಲ ಹಾಗೂ ಸ್ಥೈರ್ಯ ಹೊಂದಿದಾಗ ಏನು ಬೇಕಾದರೂ ಸಾಧಿಸಬಹುದು ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪಾಲಿಕೆ ಪ್ರತಿಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್, ಮಹಿಳೆ ನಾಲ್ಕು ಗೋಡೆಗಳಿಗೆ ಸೀಮಿತವಾಗದೇ ಎಲ್ಲ ವಲಯಗಳಲ್ಲಿ ಸಾಧನೆ ಮಾಡುತ್ತಿದ್ದಾಳೆ. ರಾಜಕೀಯ ಸೇರಿದಂತೆ ಎಲ್ಲ ರಂಗಗಳಲ್ಲಿ ಮಹಿಳೆ ಇನ್ನಷ್ಟು ಸಾಧನೆ ಮಾಡುವಂತಾಗಲಿ ಎಂದರು.

ಸ್ನೇಹ ಮಹಿಳಾ ಬಳಗದ ಗೌರವಾಧ್ಯಕ್ಷರಾದ ಶ್ರೀಮತಿ ಮಂಜುಳ ಬಸವಲಿಂಗಪ್ಪ ಮಾತನಾಡಿ, ಮಹಿಳೆ ಸ್ವಾವಲಂಬಿಯಾಗಲು ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಸಮಾನತೆ ಸಾಧಿಸುವುದು ಮುಖ್ಯ. ಆದರೆ, ಕುಟುಂಬವನ್ನು ನಿರ್ವಹಿಸುತ್ತಲೇ ಸಾಧನೆ ಮಾಡುವ ಹೊಣೆ ಮಹಿಳೆಯ ಮೇಲಿರುವುದರಿಂದ ಸಮಾಜಕ್ಕೆ ಕೊಡುಗೆ ನೀಡುವುದು ಸುಲಭವಲ್ಲ. ಈ ಸವಾಲುಗಳನ್ನು ಮಹಿಳೆ ಎದುರಿಸಿ ನಿಲ್ಲಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಸ್ಟಿನ್ ಡಿಸೌಜ ಹಾಗೂ ಕೃಷಿಕ ಮಹಿಳೆ ಮತ್ತು ಉದ್ಯಮಿ ಸರೋಜ ಪಾಟೀಲ್ ಅವರನ್ನು ಸನ್ಮಾನಿಸಲಾಯಿತು. ಬಳಗದ ಆಜೀವ ಗೌರವಾಧ್ಯಕ್ಷೆ ಮಂಜುಳ ನಿಂಗಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆ ಮೇಲೆ ಬಳಗದ ಅಧ್ಯಕ್ಷೆ ಶೋಭ ರವಿ, ಕಾರ್ಯದರ್ಶಿ ಭಾನುಮತಿ ಶಶಿಧರ್, ಖಜಾಂಚಿ ಸುವರ್ಣ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

## ಹೈಕೋರ್ಟ್ ಐತಿಹಾಸಿಕ ತೀರ್ಪು

ಬೆಂಗಳೂರು, ಮಾ. 15- ಶಾಲಾ- ಕಾಲೇಜುಗಳಲ್ಲಿ ಹಿಜಾಬ್ ಕುರಿತು ಹೈಕೋರ್ಟ್ ನೀಡಿರುವ ತೀರ್ಪಿನಿಂದ ಕಾಂಗ್ರೆಸ್ ಮುಖಂಡರಿಗೆ ಕಪಾಳ ಮೋಕ್ಷವಾಗಿದೆ ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯೂ ಆಗಿರುವ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾ ಚಾರ್ಯ ಹೇಳಿದ್ದಾರೆ.



ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಲವು ಸಂಘಟನೆಗಳು ಹಿಜಾಬ್ ಮೂಲಭೂತ ಹಕ್ಕು ಎಂದು ಶಾಂತಿ ಕದಡುವ ಪ್ರಯತ್ನ ನಡೆಸಿದ್ದವು ಎಂದು ಆರೋಪಿಸಿದರು. ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾದರೆ ಭಯೋತ್ಪಾದಕರನ್ನಾಗಿ ಬಳಸಿಕೊಳ್ಳುವ ಚಿಂತನೆ ನಡೆದಿತ್ತು. ಸಮವಸ್ತ್ರ ಕಡ್ಡಾಯ ಎಂಬ ಸರ್ಕಾರದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ. ಹೀಗಾಗಿ ಕೋರ್ಟ್ ತೀರ್ಪನ್ನು ಸ್ವಾಗತಿಸುತ್ತೇನೆ ಎಂದರು.

# 'ರಕ್ತ ಹಣ'ಕ್ಕಾಗಿ ರಾಯಭಾರಿ ಕಚೇರಿಗೆ ನಿರ್ದೇಶನ ನೀಡಲಾಗದು

## ನಿಮಿಷ ಪ್ರಿಯ ಪ್ರಕರಣದಲ್ಲಿ ಹೈಕೋರ್ಟ್ ತೀರ್ಪು

ನವದೆಹಲಿ, ಮಾ. 15 – ಕೇರಳದ ಮಹಿಳೆ ಯೆಮನ್‌ನಲ್ಲಿ ಹತ್ಯಾ ಪ್ರಕರಣದಲ್ಲಿ ಸಿಲುಕಿರುವುದರಿಂದ ಪಾರಾಗಲು 'ರಕ್ತ ಹಣ' ಪಾವತಿಸುವ ವಿಷಯದಲ್ಲಿ ಮಧ್ಯ ಪ್ರವೇಶಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ. ಭಾರತೀಯ ನಾಗರಿಕರಾದ ನಿಮಿಷ ಪ್ರಿಯ ಜೀವ ರಕ್ಷಿಸಲು ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸುವಂತೆ ನಿರ್ದೇಶನ ನೀಡಬೇಕೆಂದು 'ಸೇವ್ ನಿಮಿಷ ಪ್ರಿಯಾ ಇಂಟರ್‌ನ್ಯಾಷನಲ್ ಆಕ್ಷನ್ ಕೌನ್ಸಿಲ್' ಅರ್ಜಿ ದಾಖಲಿಸಿತ್ತು.

ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಯಶವಂತ್ ವರ್ಮ, ಯಾವುದೇ ರಾಯಭಾರಿ ಕಚೇರಿ ರಕ್ತ ಹಣ ನೀಡುವ ವಿಷಯದಲ್ಲಿ ಸಂಧಾನ ನಡೆಸುವ ಭಾಗವಾಗಲಾರದು ಎಂದು ತೀರ್ಪಿನಲ್ಲಿ ಹೇಳಿದ್ದಾರೆ.

ಯೆಮನ್‌ನ ಸ್ಥಳೀಯ ಕಾನೂನಿನ ಪ್ರಕಾರ, ಹತ್ಯೆಗೀಡಾದ ವ್ಯಕ್ತಿ ಪರಿಹಾರದ ಹಣ ಪಡೆಯಲು ಸಮ್ಮತಿಸಿದರೆ ಹಣ ಪಾವತಿಸಿ ಪ್ರಕರಣದಿಂದ ಬಿಡುಗಡೆಯಾಗಬಹುದು. ಈ ರೀತಿಯ ಹಣ ಪಾವತಿಗೆ ರಕ್ತ ಹಣ ಎಂದು ಕರೆಯಲಾಗುತ್ತದೆ.

ನಿಮಿಷ ಪ್ರಿಯ ಪರವಾಗಿ ಹಾಜರಿದ್ದ ವಕೀಲ ಸುಭಾಷ್ ಚಂದ್ರನ್ ಅವರು ವಾದ ಮಂಡಿಸಿ, ಹಣ ನೀಡಲು ಹಾಗೂ ಸಂಧಾನ ನಡೆಸಲು ಅರ್ಜಿದಾರರು ಸಿದ್ಧರಿದ್ದಾರೆ. ಆದರೆ, ಯೆಮನ್ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸರ್ಕಾರ ಸಹಾಯ ಮಾಡಬೇಕು ಎಂದು ಕೋರಿದ್ದರು.

ಆದರೆ, ಇದಕ್ಕೆ ಸಮ್ಮತಿಸದ ನ್ಯಾಯಾಲಯ, ಹೆಚ್ಚೆಂದರೆ ಅರ್ಜಿದಾರರು ಯೆಮನ್ ಕಾನೂನಿನ ಪ್ರಕಾರ ಪರಿಹಾರ ಪಡೆಯಲು ಸೌಲಭ್ಯ ಒದಗಿಸುವಂತೆ ಸರ್ಕಾರಕ್ಕೆ ಕೇಳಬಹುದು ಎಂದು ತಿಳಿಸಿದೆ.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ವಕೀಲ ಅನುರಾಗ್ ಅಹ್ಲುವಾಲಿಯ, ಈ ಪ್ರರಣದಲ್ಲಿ ಮೇಲ್ಮನವಿ ಸಲ್ಲಿಸಲು ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಅರ್ಜಿದಾರರು ಯೆಮನ್‌ಗೆ ತೆರಳಲು ಸಹಕಾರ ಹಾಗೂ ಸೌಲಭ್ಯ ಕಲ್ಪಿಸಲಾಗುವುದು ಎಂದರು.

ನಿಮಿಷ ಪ್ರಿಯ ಅವರು ಯೆಮನ್‌ನಲ್ಲಿ ನರ್ಸ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಯೆಮನ್‌ನ ತಲಾ ಅಬ್ಡೊ ಮಹ್ದಿ ಬಳಿ ಪ್ರಿಯಾ ಪಾಸ್‌ಪೋರ್ಟ್ ಇತ್ತು. ಇದನ್ನು ಪಡೆಯಲು ಮಹ್ದಿಗೆ ಪ್ರಜ್ಞೆ ತಪ್ಪಿಸುವ ಔಷದಿ ನೀಡಲಾಗಿತ್ತು. ಆದರೆ, ಔಷಧ ಅತಿಯಾಗಿ ಮಹ್ದಿ ಸಾವನ್ನಪ್ಪಿದ್ದ ಎಂದು ಆರೋಪಿಸಲಾಗಿತ್ತು.

ನಿಮಿಷ ಮದುವೆಯಾಗಿರುವುದಾಗಿ ಮಹ್ದಿ ನಕಲಿ ದಾಖಲೆ ರೂಪಿಸಿದ್ದ. ನಂತರ ಅವರನ್ನು ಹಿಂಸೆಗೆ ಗುರಿಪಡಿಸಿದ್ದ ಎಂದು ಆರೋಪಿಸಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಿಯಾಗೆ ಮರಣ ದಂಡನೆ ವಿಧಿಸಲಾಗಿದೆ.

ರಕ್ತ ಹಣ ಪಡೆದು ಕುಟುಂಬದವರು ಕ್ಷಮಿಸಿದರೆ ಮಾತ್ರ ಪ್ರಿಯಾ ಬಿಡುಗಡೆಯಾಗಿ ಬರಲು ಸಾಧ್ಯವಿದೆ ಎಂದು ಅವರ ಪರ ವಕೀಲರು ಹೇಳಿದ್ದಾರೆ.

## ನಗರ ದೇವತೆಗೆ ನಮಿಪೆ

ದುಗ್ಗಮ್ಮನ ಜಾತ್ರೆಯು ಮತ್ತೆ ಬಂದಿದೆ
ಸುಗ್ಗಿಯ ಸಂಭ್ರಮ ಸಡಗರ ತುಂಬಿದೆ
ನುಗ್ಗುವ ಜನಸಮೂಹ ಗುಡಿಸುತ್ತ ಬಂದಿದೆ
ಬಗ್ಗಿ ನಮಿಸುತ್ತ ಕ್ಷೇಮವ ಕೋರಿದೆ


ದಾವಣಗೆರೆ ನಗರದೇವತೆ ನೀನಮ್ಮ
ಕಾವ ಕೊಲುವ ದೇವಿ ನೀನೆ ದುಗ್ಗಮ್ಮ
ಭಾವಶುದ್ಧ ಭಕ್ತಿ ಮನದಲ್ಲಿ ತುಂಬಮ್ಮ
ನೋವ ಕಳೆದು ನಲಿವನು ನಗುತ ನೀಡಮ್ಮ

ದುರ್ಗಮ್ಮ ನಿನ್ನ ರೂಪ ಎಷ್ಟು ಚೆಂದವಮ್ಮ
ದುರ್ಗುಣ ದುಷ್ಟ ಶಕ್ತಿ ಸಂಹರಿಸಮ್ಮ
ದುರ್ಗಮ ಭವಸಾಗರವ ದಾಟಿಸಮ್ಮ
ದುರ್ಗದಂತೆ ಕಷ್ಟದಿಂದ ಪಾರುಮಾಡಮ್ಮ

ಮಹಿಷಾಸುರಮರ್ಧಿನಿ ನೀ ಜಗದಮ್ಮ
ಮೋಹಜಾಲ ಬಿಡಿಸಿ ಸಲಹು ನಮ್ಮಮ್ಮ
ಮಹಿಯೊಳಗೆ ಶಾಂತಿ ಸಮೃದ್ಧಿ ನೀಡಮ್ಮ
ಮಹಾಮಹಿಮ ಸಿರಿಹರಿಯ ಪ್ರೀತಿ ತಂಗ್ಯಮ್ಮ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

# ಸಮವಸ್ತ್ರ: ಹೈಕೋರ್ಟ್ ತೀರ್ಪು ಪಾಲಿಸಿ



ಬೆಂಗಳೂರು, ಮಾ. 15 - ಉಚ್ಚ ನ್ಯಾಯಾಲಯವು ಸಮವಸ್ತ್ರವನ್ನು ಎತ್ತಿ ಹಿಡಿದಿದೆ ಮತ್ತು ಹಿಜಾಬ್ ಅತ್ಯಗತ್ಯ ಧಾರ್ಮಿಕ ಆಚರಣೆಯಲ್ಲ ಎನ್ನುವುದನ್ನು ಹೇಳಿದೆ. ಮಕ್ಕಳ ಹಿತದೃಷ್ಟಿಯಿಂದ ಎಲ್ಲರೂ ನ್ಯಾಯಾಲಯದ ಆದೇಶ ಪಾಲಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ನಮ್ಮ ಮಕ್ಕಳ ಭವಿಷ್ಯ ಹಾಗೂ ಶಿಕ್ಷಣದ ಪ್ರಶ್ನೆ, ಮಕ್ಕಳಿಗೆ ವಿದ್ಯೆಗಿಂತ ಮುಖ್ಯವಾದದ್ದು ಬೇರೊಂದಿಲ್ಲ. ಉಚ್ಚ ನ್ಯಾಯಾಲಯದ ತ್ರಿಸದಸ್ಯ ಪೀಠ ನೀಡಿರುವ ತೀರ್ಪನ್ನು ನಾವೆಲ್ಲರೂ ಪಾಲಿಸಬೇಕು. ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಎಲ್ಲರೂ ಸಹಕಾರ ನೀಡಬೇಕು. ಶಾಂತಿಯನ್ನು ಕಾಪಾಡ ಬೇಕು. ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಬಹಳ ಮುಖ್ಯ. ಜನತೆ, ಎಲ್ಲ ಸಮುದಾಯದ ನಾಯಕರು, ಪಾಲಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತೀರ್ಪನ್ನು ಒಪ್ಪಿಕೊಂಡು ಶಾಂತಿ, ಸುವ್ಯವಸ್ಥೆ ಯನ್ನು ಕಾಪಾಡಿ, ತೀರ್ಪಿನ ಅನ್ವಯ ಶಿಕ್ಷಣ ನೀಡಲು ಸಹಕರಿಸ ಬೇಕೆಂದು ಕಳಕಳಿಯ ವಿನಂತಿ ಮಾಡಿದರು.

ಎಲ್ಲಾ ವಿದ್ಯಾರ್ಥಿಗಳು ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸಬೇಕು. ನಿಮ್ಮ ಶಿಕ್ಷಣ ಬಹಳ ಮುಖ್ಯ. ಪರೀಕ್ಷೆಗಳಿಂದ ಹೊರಗುಳಿಯದೇ, ಎಲ್ಲರೂ ತರಗತಿಗಳಿಗೆ ಹಾಜರಾಗಬೇಕು, ನಿಮ್ಮ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸಲು ನಾವು-ನೀವೆಲ್ಲರೂ ಚಿಂತಿಸಬೇಕು ಎಂದು ಕರೆ ನೀಡಿದರು.

ಕಾನೂನು ಸುವ್ಯವಸ್ಥೆಗೆ ಅಗತ್ಯ ವ್ಯವಸ್ಥೆ ಮಾಡಲಾಗಿದೆ. ಉಚ್ಚ ನ್ಯಾಯಾಲಯದ ತೀರ್ಪಿನಿಂದ ಪ್ರಕರಣ ಇತ್ಯರ್ಥವಾಗಿರುವುದರಿಂದ ಎಲ್ಲರೂ ಅದನ್ನು ಒಪ್ಪಿಕೊಳ್ಳಬೇಕು. ಇದಕ್ಕೆ ವ್ಯತಿರಿಕ್ತವಾಗಿ ಕಾನೂನನ್ನು ಕೈಗೆ ತೆಗೆದುಕೊಂಡರೆ ನಮ್ಮ ಗೃಹ ಇಲಾಖೆ ಕಠಿಣ ಕ್ರಮ ಜರುಗಿಸಲಿದೆ ಎಂದು ಮುಖ್ಯಮಂತ್ರಿ ಹೇಳಿದರು.

## ಎಸ್‌ಎಜೆಬಿ ಕಾಲೇಜಿನಲ್ಲಿ ಗ್ರಾಮೀಣ ಸೊಗಡಿನ ಸಾಂಸ್ಕೃತಿಕ ಕಾರ್ಯಕ್ರಮ

ದಾವಣಗೆರೆ, ಮಾ.15- ನಗರದ ಪಿ.ಜೆ.ಬಡಾವಣೆಯ ಎಸ್‌ಎಜೆಬಿ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಗ್ರಾಮೀಣ ಸೊಗಡಿನ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರಾಂಶುಪಾಲ ಎಸ್.ಪ್ರದೀಪ್‌ಕುಮಾರ್ ಕಾರ್ಯಕ್ರಮಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಕಾಲೇಜಿನ ಪ್ರತಿ ತರಗತಿಗಳ ವಿದ್ಯಾರ್ಥಿಗಳು ವಿಶೇಷ ವಿಷಯಗಳಾಗಿ ಸುಗ್ಗಿ- ಸಂಕ್ರಾಂತಿ, ದೀಪಾವಳಿ, ಗಣೇಶ ಹಬ್ಬ, ಸರಸ್ವತಿ ಪೂಜೆಗಳನ್ನು ತಮ್ಮ ಕ್ರಿಯಾಶೀಲ ಪ್ರಯೋಗದ ಮೂಲಕ ವಿಭಿನ್ನವಾಗಿ ಅನಾವರಣಗೊಳಿಸಿದ್ದರು. ಅಲ್ಲದೇ ಬಗೆ-ಬಗೆಯ ರಂಗೋಲಿ,ಹೂಗಳ ಅಲಂಕಾರ ಮತ್ತು ಹಳ್ಳಿ ರುಚಿಯ ಅಡುಗೆಗಳ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿ ಗಮನ ಸೆಳೆದರು.

## ದೇಹದಾರ್ಢ್ಯ ಸ್ಪರ್ಧೆಯಲ್ಲಿ ಸುಶೀಲ್‌ಕುಮಾರ್ ಪ್ರಥಮ



ಹರಪನಹಳ್ಳಿ, ಮಾ. 15- ನಗರದಲ್ಲಿ ಮೊನ್ನೆ ನಡೆದ ಎತ್ತರ ವಿಭಾಗದ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ದಾವಣಗೆರೆಯ ಸ್ಟೈಲ್ ಫಿಟ್‌ನೆಸ್‌ನ ಸುಶೀಲ್‌ಕುಮಾರ್ ಪ್ರಥಮ ಸ್ಥಾನ ಪಡೆದಿದ್ದಾರೆ. ಸ್ನೇಹಿತರಾದ ಸತೀಶ್, ಆನಂದ್, ಮಾರುತಿ ಉಪಸ್ಥಿತರಿದ್ದರು.

## ತಾರೇಹಳ್ಳಿ : ಇಂದು ತೇರು

ಜಗಳೂರು ತಾಲ್ಲೂಕಿನ ತಾರೇಹಳ್ಳಿಯಲ್ಲಿ ಶ್ರೀ ರಂಗನಾಥಸ್ವಾಮಿ ರಥೋತ್ಸವ ಇಂದು ಸಂಜೆ 6.30 ಕ್ಕೆ ಜರುಗುವುದು. ನಾಳೆ ಗುರುವಾರ ಜಾತ್ರೆ, ನಾಡಿದ್ದು ದಿನಾಂಕ 18 ರ ಶುಕ್ರವಾರ ಓಕಳಿ ಉತ್ಸವ ನಡೆಯುವುದು.

## ವಿದ್ಯಾಸಿರಿ ಯೋಜನೆಗೆ ಅರ್ಜಿ ಆಹ್ವಾನ

ದಾವಣಗೆರೆ, ಮಾ.15- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ -ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್ ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಇದೇ ದಿನಾಂಕ 31 ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ ಬ್ಯಾಂಕ್ ಪ್ರವರ್ತಕರು : ಕೆನರಾ ಬ್ಯಾಂಕ್
ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ ಗಾಂಧಿನಗರ ಬಳ್ಳಾರಿ (ಕರ್ನಾಟಕ)
ಪ್ರಾದೇಶಿಕ ಕಛೇರಿ : ಫ್ಲಾಟ್ ನಂ. 101, ಎಸ್.ವಿ. ಬೃಂದಾವನಂ ಅಪಾರ್ಟ್‌ಮೆಂಟ್,
ಬೈ-ಪಾಸ್ ರಸ್ತೆ, 11ನೇ ವಾರ್ಡ್ ಚಿತವಾಡಗಿ, ಹೊಸಪೇಟೆ-583211 ವಿಜಯನಗರ ಜಿಲ್ಲೆ ಫೋ. : 08194 234374

ವಿಶ್ವಾಸದ ಪ್ರತೀಕ

ಶಾಖೆ : ಹಲವಾಗಲು ಹರಪನಹಳ್ಳಿ ತಾಲ್ಲೂಕು ಫೋನ್: 99459 54670

## ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಗಳಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲ ಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಕಂಡ ಹರಾಜಿನ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ಈ ಕೆಳಕಂಡ ದಿನಾಂಕ ಹಾಗೂ ಸಮಯದಂದು ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟಿಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ, ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

| ಕ್ರ.ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 01 | ಲಲಿತಮ್ಮ ಪಿ. ಕೋಂ. ಗುಡ್ಡಪ್ಪ, ಹಲವಾಗಲು. | 40620302007820 | 70,425-00 |
| 02 | ಕೆಂಚಪ್ಪ ಜೆ.ಕೆ. ಬಿನ್‌ಮೈಲಪ್ಪ, ನಿಟ್ಟೂರು. | 40620302013520 | 74,567-00 |
| 03 | ಮಂಜುಳ ಶಾಮನೂರು ಕೋಂ ಹನುಮಂತಪ್ಪ, ಹಲವಾಗಲು. | 40620302017320 | 17,180-00 |
| 04 | ಚಂದ್ರಶೇಖರ್ ಬಿನ್ ಚಿನ್ನ ನಾಯ್ಕ, ಗರ್ಭಗುಡಿ ತಾಂಡಾ. | 40620302019720 | 28,578-00 |
| 05 | ಮಹೇಶ್ ಜಿ. ಗಜ್ಜಿ ಬಿನ್ ಗೋಣೆಪ್ಪ, ಕುಂಚೂರು. | 40620302032120 | 61,362-00 |
| 06 | ವೆಂಕಾರೆಡ್ಡಿ ಟಿ. ಬಿನ್ ದೇವೆಂದ್ರಪ್ಪ, ಅರಸನಾಳು. | 40620302033220 | 80,929-00 |
| 07 | ಜಯಮ್ಮ ಕೋಂ ಶಿವಕುಮಾರ್, ಅರಸನಾಳು. | 40620302036920 | 27,478-00 |
| 08 | ಮೊಟೆಪ್ಪನವರ ನೂರುಲ್ಲಾ ಬಿನ್ ಹಸನ್‌ಮಿಯಾ, ಕುಂಚೂರು. | 40620302040020 | 21,933-00 |
| 09 | ಗುತ್ತಿ ಕನ್ನಾವರ ಮೈಲಪ್ಪ ಬಿನ್ ಕರಿಯಪ್ಪ, ನಿಟ್ಟೂರು. | 40620302049820 | 47,907-00 |
| 10 | ಅಂಜಿನಪ್ಪ ಮ್ಯಾಕೆ ಬಿನ್ ಹನುಮಂತಪ್ಪ, ಕುಂಚೂರು. | 40620302053420 | 49,931-00 |
| 11 | ಮಲ್ಲವ್ವ ತೋಟಣ್ಣರ, ಹಲವಾಗಲು. | 40620302053820 | 42,306-00 |
| 12 | ಮಂಜಪ್ಪ ಬಿನ್ ನೀಲಪ್ಪ, ಮತ್ತೂರು. | 40620302057220 | 57,462-00 |
| 13 | ಪೂಜಾರ್ ಹೊನ್ನಮ್ಮ ಕೋಂ ವಾಮದೇವಪ್ಪ, ಕುಂಚೂರು. | 40620302064220 | 29,079-00 |
| 14 | ಪೂಜಾರ್ ವಿಜಯ ನಾಯ್ಕ ಬಿನ್ ವಿದ್ಯಾನಾಯ್ಕ, ಕುಂಚೂರು. | 40620302068720 | 1,06,207-00 |
| 15 | ಮಲ್ದಾರ್ ಕುರ್ಷಿದ್ ಬಾನು ಕೋಂ ಮಲ್ದಾರ್ ಚಮನ್ ಸಾಬ್, ಕುಂಚೂರು. | 40620302068820 | 52,031-00 |
| 16 | ಬಾರ್ಕಿ ಹೊನ್ನಪ್ಪ ಬಿನ್ ಹೊಳಿಬಸಪ್ಪ, ನಿಟ್ಟೂರು. | 40620302068920 | 19,311-00 |
| 17 | ನಾಗರಾಜ್ ಬಿನ್ ರಾಮಪ್ಪ, ಕುಂಚೂರು. | 40620302072720 | 25,695-00 |
| 18 | ಮುಕಡಿ ಮಸಿನಾ ಕೋಂ ಬಾಷ, ಕುಂಚೂರು. | 40620302073120 | 24,198-00 |
| 19 | ಕೆ. ಮಹೇಶ್ವಪ್ಪ ಬಿನ್ ಕೃಷ್ಣಪ್ಪ, ಯರಬಾಳು | 40620302073820 | 1,15,530-00 |
| 20 | ಶಿವಕ್ಕ ಮಸಲವಾಡ ಕೋಂ ಶಿವರಾಜ್, ಗರ್ಭಗುಡಿ | 40620302076820 | 64,026-00 |
| 21 | ಓಲೇಕಾರ ನಾಗಮ್ಮ ಕೋಂ ಅಂಜಿನಪ್ಪ, ಹಲವಾಗಲು. | 40620302078020 | 34,084-00 |
| 22 | ಕಪ್ಸರ್ ಬಾನು ಕೋಂ ಮಾಬೂಸಾಬ್, ಕುಂಚೂರು. | 40620302078820 | 21,302-00 |
| 23 | ಕಲ್ಲಮ್ಮ ದ್ಯಾಮಳ್ಳಿ ಕೋಂ ಮಂಜಪ್ಪ, ಹಲವಾಗಲು. | 40620302079420 | 35,127-00 |
| 24 | ಮಜೆ ರೆಹಮಾನ್ ಮಲ್ದಾರ್ ಬಿನ್ ಇಮಾಮ್ ಸಾಬ್, ಕುಂಚೂರು. | 40620302080020 | 24,483-00 |
| 25 | ನಾಗನಗೌಡ ಬಿನ್ ರಾಮಚಂದ್ರ ಗೌಡ, ಹಲವಾಗಲು. | 40620302081120 | 6,384-00 |
| 26 | ಕಿರಣ್ ಗೂಳೇರ ಬಿನ್ ನಿಂಗಪ್ಪ, ಕುಂಚೂರು | 40620302081220 | 60,648-00 |
| 27 | ವಿಶ್ವನಾಥ್ ಟಿ.ಎಸ್. ಬಿನ್ ಶಿವಾನಂದಯ್ಯ, ಹಲವಾಗಲು. | 40620302081720 | 23,404-00 |
| 28 | ಗಂಗಪ್ಪ ಬನ್ನೇರ ಆರ್ಯ ಬಿನ್ ಯಲ್ಲಮ್ಮ, ನಿಟ್ಟೂರು. | 40620302082920 | 80,814-00 |
| 29 | ಮುನಾಫ್ ಸಾಬ್ ಬಿನ್ ಇಮಾಮ್ ಸಾಬ್, ಕುಂಚೂರು. | 40620302083120 | 38,281-00 |
| 30 | ಚಿನ್ನಮ್ಮ ಲಂಬಾಣಿ ಕೋಂ ಎಲ್ ದೌಜನಾಯ್ಕ, ಒಳತಾಂಡಾ. | 40620302085720 | 87,086-00 |
| 31 | ರಾಜಪ್ಪ ಚಲುವಾದಿ ಬಿನ್ ಹಾಲಪ್ಪ, ಕುಂಚೂರು. | 40620302086420 | 10,619-00 |
| 32 | ಮುಂಗ್ಲಿ ಮಂಜುನಾಥ್ ಬಿನ್ ಮುಂಗ್ಲಿ ಹನುಮಂತಪ್ಪ, ಹಲವಾಗಲು. | 40620302087520 | 12,739-00 |
| 33 | ಹಲಗಿ ಎನ್. ದ್ರಾಕ್ಷಾಯಣಿ, ಬಿನ್ ಹೊನ್ನಪ್ಪ, ಕುಂಚೂರು. | 40620302088020 | 10,615-00 |
| 34 | ಪುಷ್ಪಮೈಲಾರದ ಕೋಂ ರಮೇಶ್ ಮೈಲಾರದ, ಹಲವಾಗಲು. | 40620302090020 | 12,710-00 |
| 35 | ಬಿಳಿಚೋಡ್ ಚಂದ್ರಪ್ಪ ಬಿನ್ ಸಣ್ಣ ಕರಿಯಪ್ಪ, ಹಲವಾಗಲು. | 40620302051619 | 39,569-00 |
| | | | 26,24,872-00 |

ಚಿನ್ನಾಭರಣದ ಹರಾಜಿನ ದಿನಾಂಕ: 25.03.2022
ಸಮಯ : ಬೆಳಗ್ಗೆ 11.00 ಗಂಟೆಗೆ

ಸಹಿ/- ವ್ಯವಸ್ಥಾಪಕರು
ಕರ್ನಾಟಕ ಗ್ರಾಮೀಣ ಬ್ಯಾಂಕ್, ಶಾಖೆ : ಹಲವಾಗಲು.

KENT
Mineral RO
Water Purifiers
ಕೆಂಟ್ ನೀಡುತ್ತೆ ಎಲ್ಲಕ್ಕಿಂತ ಪರಿಶುದ್ಧ ನೀರು...!
RO + UF + UV + TDS Control
Authorised Original Distributor:
HAMSA ENTERPRISES
Chetana Hotel Road, P.J. Extension,
DAVANGERE.
Ph: 08192-236220, 232355 Mob: 9448318835

ANVITH ENTERPRISES
FINANCIAL ADVISOR®
P.J. EXTENSION, DAVANGERE-577 004.
1) ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆಯಿಂದ ನಷ್ಟವನ್ನು ಅನುಭವಿಸಿದ್ದೀರಾ ?
2) ಪ್ರತಿದಿನದ ಭಾರೀ ಏರುಪೇರಿನ ವಹಿವಾಟಿಗೆ ಹಣವನ್ನು ಹೇಗೆ ಹೂಡಿಕೆ ಮಾಡಬೇಕೆಂಬ ಗೊಂದಲವೇ? ಈ ಸಮಸ್ಯೆಗಳಿಂದ ಮುಕ್ತರಾಗಿ.
3) Long-Term ಮತ್ತು Short-Term ಹೂಡಿಕೆ ಮುಖಾಂತರ ಸುರಕ್ಷಿತವಾಗಿ ಉತ್ತಮ ಲಾಭವನ್ನು ಪಡೆಯಲು ಹಾಗೂ
4) ಪ್ರತಿ ತಿಂಗಳ ಸಾಲದ EMI ನಿಂದ ಮುಕ್ತರಾಗಿ ಮಕ್ಕಳ ಶಿಕ್ಷಣ ಮತ್ತು ನಿಮ್ಮ ನಿವೃತ್ತಿ ಜೀವನದ ನೆಮ್ಮದಿಯ ದಿನಗಳಿಗಾಗಿ ಉಳಿತಾಯದ ಹೆಜ್ಜೆಗೆ ಸಾಗಲು Children's Savings Plans, Retirement Plans, Income-Tax Saving Plans, Health plans, Term Plans ಹಾಗೂ ಆರ್ಥಿಕವಾಗಿ ಸಬಲರಾಗಲು ಸಂಪರ್ಕಿಸಿ :
VIJAYA NIRANJANA MYLARA-8792673593

ಶ್ರೀ ಜೈ ಶಂಕರಿ ಜ್ಯೋತಿಷ್ಯ ಮಂದಿರ
Numero Astrologer & Palmistry
ಉತ್ತರ ಕರ್ನಾಟದ ಪ್ರಖ್ಯಾತ ಜ್ಯೋತಿಷ್ಯರು, ಪ್ರಥಮ ಬಾರಿಗೆ ನಗರಕ್ಕೆ ಆಗಮಿಸಿದ್ದಾರೆ. ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಾಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ
ವಿ.ಸೂ.: ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ
ವಿಳಾಸ: ಪಂ. ಅರುಣ್ ಕುಮಾರ್ ಆಚಾರ್ಯ
ಐಶ್ವರ್ಯ ಪ್ಲಾಜಾ, ಶಿವ ಪಾರ್ವತಿ ದೇವಸ್ಥಾನದ ಹತ್ತಿರ ವಿದ್ಯಾನಗರ, ದಾವಣಗೆರೆ
ನಿಮ್ಮ ಯಾವುದೇ ಪ್ರಶ್ನೆಗಳಿಗೆ 201/- ರೂ
ಮೊಬೈಲ್ : 94481 78626, 96068 18273

BSC
B.S. CHANNABASAPPA & SONS
ಸ್ಥಾಪನೆ - 1938
ಪ್ರತಿಭೆಯ ಹುಡುಕಾಟ
ವಾಕ್-ಇನ್ ಸಂದರ್ಶನ
(ದಾವಣಗೆರೆಯ ಮಳಿಗೆಗಳಲ್ಲಿ ಮಾತ್ರ)
ಕೆಲಸ ಮಾಡಲು ಆಸಕ್ತಿ ಹೊಂದಿರುವ
ಸೇಲ್ಸ್ ಅಸೋಸಿಯೇಟ್ಸ್ (ಪುರುಷರು)
(26 ವರ್ಷ ಒಳಗಿನ ಮತ್ತು 1 ರಿಂದ 5 ವರ್ಷಗಳಷ್ಟು ಅನುಭವವಿರಬೇಕು)
ಸೂಟಿಂಗ್ & ಶರ್ಟಿಂಗ್, ಪುರುಷರ ರೆಡಿಮೇಡ್ ಮತ್ತು ಎತ್ನಿಕ್ ವೇರ್
(ಆಸಕ್ತಿಯುಳ್ಳ ಫ್ರೆಷರ್‌ಗಳು ಅರ್ಜಿಯನ್ನು ಸಲ್ಲಿಸಬಹುದು)
ಸಂದರ್ಶನದ ದಿನಾಂಕ : 16, 17 & 18 ಮಾರ್ಚ್ 2022
ಸಂದರ್ಶನ ನಡೆಯುವ ಸ್ಥಳ : ಬಿ.ಎಸ್.ಸಿ ಮೆನ್ಸ್ ಸೂಟಿಂಗ್ ಶರ್ಟಿಂಗ್ ವಿಭಾಗ ಕಾಳಿಕಾದೇವಿ ರಸ್ತೆ, ದಾವಣಗೆರೆ
ಸಂದರ್ಶನದ ಸಮಯ : ಬೆಳಗ್ಗೆ 10:30 ರಿಂದ ಮಧ್ಯಾಹ್ನ 2:30 ರವರೆಗೆ
ಬೇಕಾಗಿರುವ ದಾಖಲೆಗಳು
• ಆಧಾರ್ ಕಾರ್ಡ್ (ಎರಡೂಕಡೆಯ ಪ್ರತಿಗಳು)
• ಪಾಸ್ ಪೋರ್ಟ್ ಅಳತೆಯ ಫೋಟೋ (2 ಫೋಟೋಗಳು)
ಪ್ರಯೋಜನಗಳು
• ಇನ್ಸೆಂಟಿವ್ • ಬೋನಸ್
• ಪಿ.ಎಫ್ • ಇ.ಎಸ್.ಐ

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟು ಮಾರಾಟಕ್ಕೆ (JHP)**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ
20x30 ಪೂರ್ವ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
ಸೈಟು, ಮನೆ ಖರೀದಿಗೆ ಬೇಕಾಗಿದೆ

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಪುರುಷ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಬೇಕಾಗಿದ್ದಾರೆ**
10 ನೇ ತರಗತಿಯ ವಿದ್ಯಾರ್ಥಿಗಳಿಗೆ ಗಣಿತ , ಸೈನ್ಸ್ ಟ್ಯೂಷನ್ ಮಾಡಲು ಶಿಕ್ಷಕ/ ಶಿಕ್ಷಕಿಯರು ಬೇಕಾಗಿದ್ದಾರೆ.
ಸಮಯ: 6-8am ರಿಂದ 5-7 pm
ಫೋ. : 97392 30843

**ಮನೆ ಮಾರಾಟಕ್ಕಿದೆ**
40x60 ನಿವೇಶನದಲ್ಲಿ 3 ಬೆಡ್ ರೂಂ RCC ಕಟ್ಟಡ, # 521, 'ಸಿರಿ' ಆಂಜನೇಯ ದೇವಸ್ಥಾನದ ರಸ್ತೆ, ಆಂಜನೇಯ ಬಡಾವಣೆ, ದಾವಣಗೆರೆ.
ಫೋ. : 94486 61467

**ಮನೆ ಮಾರಾಟಕ್ಕಿದೆ**
ಎಸ್. ಎಸ್. ಲೇಔಟ್ 'ಬಿ' ಬ್ಲಾಕ್, ಎರಡನೇ ಮೇನ್, ಪಶ್ಚಿಮ ದಿಕ್ಕಿನಲ್ಲಿ 20 x 65 ಅಳತೆಯ RCC ಗ್ರೌಂಡ್ ಫ್ಲೋರ್ ಒಂದನೇ ಮಹಡಿ, ಎರಡನೇ ಮಹಡಿ ಹೊಸ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ:
ಮೊ. 90191 19905

**ಬೇಕಾಗಿದ್ದಾರೆ**
ದಾವಣಗೆರೆಯ ಊಟದ ಹೋಟೆಲ್‌ನಲ್ಲಿ ಕೆಲಸ ಮಾಡಲು ಹುಡುಗರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಪರಸ್ಥಳದವರಿಗೆ ಉಚಿತ ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು.
ಸಂಪರ್ಕಿಸಿ. 94489 80070, 78991 90070

ನಗರ ದೇವತೆ ಜಾತ್ರೆಯ ಪ್ರಯುಕ್ತ ಆಯ್ದ ಕೈ ಗಡಿಯಾರಗಳ ಮೇಲೆ 30% ರಿಯಾಯಿತಿ. ಈ ಕೊಡುಗೆ ಕೆಲವೇ ದಿನಗಳು ಮಾತ್ರ.
**ಸೆಂಟ್ ಜೋಸೆಫ್ ಟೈಮ್ಸ್**
ರಾಂ ಅಂಡ್ ಕೋ ಸರ್ಕಲ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98440 11958

**ಮನೆ ಮಾರಾಟಕ್ಕಿವೆ**
ಒಂದನೇ ಮೇನ್, ಒಂದನೇ ಕ್ರಾಸ್ ಭಗತ್ ಸಿಂಗ್ ನಗರ 15+40 ಕೆಳಗೆ ಮತ್ತು ಮೇಲೆ ಮನೆ ಮಾರಾಟಕ್ಕಿದೆ.
ಸೈಫುದ್ದೀನ್
79750 04328

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 70266 43088

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಹಿಟ್ಟಿನ ಗಿರಣಿ ಬಾಡಿಗೆಗಿದೆ**
ವಿದ್ಯಾನಗರ,ವಿನಾಯಕ ಬಡಾವಣೆ, 20 ನೇ ಕ್ರಾಸ್‌ನಲ್ಲಿರುವ 24 K.V ವಿದ್ಯುತ್ ಸಂಪರ್ಕವಿರುವ ರಾಗಿ, ಜೋಳ, ಗೋದಿ, ಕಾರಪುಡಿ, ಸಂಬಾರ್ ಪುಡಿ ಬೀಸುವ ಸುಸಜ್ಜಿತವಾದ ಗಿರಣಿ.
98441 91743,99161 06139

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 9000 ರೂ. ಊಟ, ರೂಂ ಉಚಿತ.
97400 98064
97400 98047

**GPSTR, KPTCL COACHING**
ಹೊಸ ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಕೋಚಿಂಗ್ ಅಕಾಡೆಮಿ, ಸೆಂಟ್‌ಪಾಲ್ ಕಾನ್ವೆಂಟ್ ರೋಡ್, ದಾವಣಗೆರೆ
63646 40296

**ಮನೆ ಬಾಡಿಗೆಗೆ ಇದೆ**
1ನೇ ಫ್ಲೋರ್, 2 BHK ಬೋರ್‌ವೆಲ್ ಹಾಗೂ ಮುನ್ಸಿಪಾಲಿಟಿ ನೀರಿನ ವ್ಯವಸ್ಥೆ ಇದೆ. ಶಿವಕುಮಾರ ಸ್ವಾಮಿ ಬಡಾವಣೆ, 6ನೇ ಕ್ರಾಸ್, 2ನೇ ಮೇನ್, (ಸಸ್ಯಹಾರಿಗಳಿಗೆ ಮಾತ್ರ)
73493 72914, 74062 93090

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಸ್ಕೂಲ್ ಬಸ್ ಮಾರಾಟಕ್ಕಿವೆ**
EICHER ಕಂಪನಿಯ 41 ಆಸನಗಳ, 10.11.2012, 10.12.2012 ರ ಮಾಡೆಲ್‌ನ ಚಾಲೂ ಸ್ಥಿತಿಯಲ್ಲಿರುವ ಎರಡು ಸ್ಕೂಲ್ ಬಸ್‌ಗಳು ಮಾರಾಟಕ್ಕಿವೆ. ಸಂಪರ್ಕಿಸಿ.
98801 34994

**TO LET**
Office or Gowdown or Commercial Building for Rent
30 HP power speciality available
Ground Floor & II Floor 20 sqft
Opp. : Sub Register Office Behind Malabar Tyre, P.B. Road, Davangere.
98862 55308, 96111 14244

**ಮಳಿಗೆ ಇರುವ ಮನೆ ಬಾಡಿಗೆಗೆ ಇದೆ**
2 ಬೆಡ್ ರೂಂ ಅಟ್ಯಾಚ್ ಬಾತ್ ರೂಂ, ಮಳಿಗೆ, ಕಾರ್ ಪಾರ್ಕಿಂಗ್ ವ್ಯವಸ್ಥೆಯಿರುವ ಮನೆ ಬಾಡಿಗೆಗೆ ಇದೆ. ಆಂಜನೇಯ ಬಡಾವಣೆ, 2ನೇ ಮೇನ್
ಫೋ. : 99724 93531

**ಕುರಿ/ಟಗರುಗಳು ಮಾರಾಟಕ್ಕಿವೆ**
ಹರಪನಹಳ್ಳಿ ರೋಡ್, ಬಿ. ಚಿತ್ತಾನಹಳ್ಳಿಯಲ್ಲಿರುವ ನಮ್ಮ ಫಾರಂ ಹೌಸಿನ ತೋಟದ ಮನೆಯಲ್ಲಿ ಉತ್ತಮವಾದ ಕುರಿ/ಟಗರುಗಳು ಮಾರಾಟಕ್ಕೆ ದೊರೆಯುತ್ತವೆ.
87627 47245, 80952 14840

**ಹೆಸರು ಬದಲಾವಣೆ**
ದಾವಣಗೆರೆಯ ಟಿ.ವಿ. ಸ್ಟೇಷನ್ ಹಿಂಭಾಗ ಜೀವನ್ ಭೀಮಾ ನಗರ (#2365/4) ವಾಸಿ ಅಜ್ಜಪ್ಪ ಬಿನ್ ಸಿದ್ದಲಿಂಗಪ್ಪ ಆದ ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ಆಧಾರ್ ಕಾರ್ಡ್‌ನಲ್ಲಿ ನನ್ನ ಹೆಸರು ಮತ್ತು ವಿಳಾಸ ಟಿ.ಎಸ್. ಯತಿಗುಣ ಶಿವಯೋಗಿ ಬಿನ್ ಸಿದ್ದಲಿಂಗಪ್ಪ ಟಿ.ಎಸ್. ಎಂದು ತಪ್ಪಾಗಿ ನಮೂದಾಗಿದ್ದು, ದಿನಾಂಕ 15.3.2022 ರಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ನನ್ನ ಹೆಸರನ್ನು ಅಜ್ಜಪ್ಪ ಬಿನ್ ಸಿದ್ದಲಿಂಗಪ್ಪ ಎಂದು ತಿದ್ದುಪಡಿ ಮಾಡಿಸಿಕೊಂಡಿದ್ದೇನೆ. ನನ್ನ ಎಲ್ಲಾ ವ್ಯವಹಾರಗಳು ಅಜ್ಜಪ್ಪ ಬಿನ್ ಸಿದ್ದಲಿಂಗಪ್ಪ ಎಂಬ ಹೆಸರಿನಲ್ಲೇ ನಡೆಯುತ್ತವೆ ಎಂದು ಪ್ರಮಾಣೀಕರಿಸಿದ್ದೇನೆ. - ಅಜ್ಜಪ್ಪ

**PRINCE COLLEGE**
DAVANGERE
SSLC, PUC, BA, B.Com, B.Sc, M.A, M.Com, M.Sc, B.Lib, B.Lisc, M.B.A, M.C.A, LL.B, Diploma, B.Tech., D. Farm &, All Courses
77609 55550, 96200 28627

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ತಾ, ಕೋಲ್ಕುಂಟೆ ಗ್ರಾಮದ ಸರ್ವೆ ನಂ. 40, 18 ನೀರಾವರಿ ಜಮೀನು ಮಾರಾಟಕ್ಕಿದೆ.
ಸಂಪರ್ಕಿಸಿ
97438 18582
63622 66393

**GST Registration**
INCOME TAX cases, Audit and for Account Maintenances
MEGHANA ASSOCIATES (R)
99809 16126


**ಮಿಯಾಖಾನ್ ಬೆಂಗಾಲಿ**
ಎಲ್ಲ ಸಮಸ್ಯೆಗಳಿಗೆ ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್. ನಿಮ್ಮ ಸಮಸ್ಯೆಗಳಾದ ಆಸ್ತಿ-ವಾಸ್ತು, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮ ವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ.
ದಾವಣಗೆರೆ.
ಮೊ. : +918476949581

**ಓಂ ಶ್ರೀ ತುಳಜಾಭವಾನಿ ಜ್ಯೋತಿಷ್ಯಾಲಯ**
ಪಂಡಿತ್: ಯಲ್ಲಪ್ಪರಾವ್ ಜೋಷಿ ಕೊಳ್ಳೆಗಾಲದ ನಂ. 1 ಜ್ಯೋತಿಷ್ಯರು ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿದ್ದರೂ ಕೇವಲ 3 ದಿನಗಳಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಇಂದೇ ಭೇಟಿ ಕೊಡಿ. ದಾವಣಗೆರೆ.
99456 66887

**CHEAP FAST AND PERFECT SERVICES**
Under GST, Income Tax
Ph. : 77607 40760

**SHOPS FOR RENT**
(With Wash Room Facility)
N.R. ROAD, DAVANGERE.
94483 69523

**ಸಂಘ-ಸಂಸ್ಥೆಗಳ ಬೈಲಾ ನೋಂದಣಿ, ನವೀಕರಣ ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ.**
MEGHANA ASSOCIATES. (R)
99809 16126


## ಬೇರು ಬಿಟ್ಟಿರುವ ನಗರಾಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿ ವರ್ಗ

**ಸಚಿವ ಭೈರತಿ ಬಸವರಾಜ್**

ಬೆಂಗಳೂರು, ಮಾ. 15 - ಹತ್ತಾರು ವರ್ಷಗಳಿಂದ ಒಂದೇ ಕಡೆ ಬೇರು ಬಿಟ್ಟಿರುವ ನಗರಾಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿಗಳನ್ನು ವರ್ಗಾವಣೆ ಮಾಡಲು ನಿಯಮಗಳನ್ನು ಜಾರಿಗೆ ತರಲಾಗುವುದು ಎಂಧು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಆಯನೂರು ಮಂಜುನಾಥ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಪ್ರಾಧಿಕಾರದಲ್ಲಿ ಕೆಲಸ ಮಾಡುವ ಸಿಬ್ಬಂದಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಲು ಅನುಕೂಲವಾಗುವಂತೆ ಸಿಬ್ಬಂದಿ ಮತ್ತು ನೇಮಕಾತಿ ನಿಯಮಗಳನ್ನು ಬದಲಾವಣೆ ಮಾಡಿ ಆರು ತಿಂಗಳಲ್ಲಿ ಕಾನೂನು ತರಲಾಗುವುದು ಎಂದರು.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳು ಸ್ಥಳೀಯ ಪ್ರಾಧಿಕಾರದ ಸೇವೆಗೆ ನೇಮಕಾತಿಯಾಗಿರುತ್ತಾರೆ, ಅದಕ್ಕಾಗಿ ಅವರನ್ನು ವರ್ಗಾಯಿಸಲು ಅವಕಾಶವಿಲ್ಲ. ಇನ್ನೂ ಬಿಬಿಎಂಪಿ ಹೊರತು ಪಡಿಸಿ ರಾಜ್ಯದ 10 ಪಾಲಿಕೆಗಳಲ್ಲಿ 2011ರಲ್ಲಿ ಏಕರೂಪ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲಾಗಿದೆ. ಪ್ರಾಧಿಕಾರ ಮತ್ತು ಪಾಲಿಕೆಗಳ ನಡುವೆ ಅಂತರ ವರ್ಗಾವಣೆಗೆ ಅವಕಾಶ ಇಲ್ಲ. ಮುಂದೆ ನಿಯಮಗಳನ್ನು ಬದಲಾವಣೆ ಮಾಡಲಾಗುವುದು ಎಂದರು.

## 'ಕಾಶ್ಮೀರ್ ಫೈಲ್' ಚಿತ್ರ ನೋಡಿದ ನಂತರ ಕಣ್ಣೊರೆಸಿಕೊಳ್ಳದೆ ಇರಲಾರಿರಿ




ಕಾಶ್ಮೀರ್ ಫೈಲ್ ಚಿತ್ರ ನೋಡಿದ ನಂತರ ಮಾತು ಬಾರದೇ ಮೂಕವಾಗಬಹುದು..

ದೇಶ ಪ್ರೇಮದ ನೆತ್ತರು ಧಮನಿ ಧಮನಿಗಳಲ್ಲಿ ಉಕ್ಕಿ ಹರಿಯಬಹುದು..

ಮನಸು ಭಾರವಾಗಿ ಕಣ್ಣೀರು ಧಾರೆಯಾಗಬಹುದು. ನಿಜವಾದ ಭಾರತೀಯ ಆದಲ್ಲಿ ಕಾಶ್ಮೀರ್ ಫೈಲ್ ನೋಡಿ ಕಣ್ಣೊರೆಸಿಕೊಳ್ಳದೇ ಇರಲಾರ!!!

ಕಾಶ್ಮೀರದ ಕಣಿವೆಯಲ್ಲಿ ಹರಿದ ರಕ್ತದ ಕೋಡಿಗಳೆಷ್ಟೋ? ಉಸಿರೆತ್ತದ ಜೀವಗಳ ಬಲಿಯೆಷ್ಟೋ? ಕ್ರೂರ ಮುಖಗಳ ಪಾಪಕ್ಕೆ ಶಿಕ್ಷೆಯೆಂದೋ? ದೇಶಭಕ್ತರು ಎಚ್ಚೆತ್ತುಕೊಳ್ಳದಿದ್ದಲ್ಲಿ ಕಾಶ್ಮೀರ ಕಣಿವೆಯ ಕಥೆಗಳು ಮುಂದೊಂದು ದಿನ ನಮ್ಮನಿಮ್ಮಲ್ಲೂ ಕಾಣಬಹುದು. ಕಾಶ್ಮೀರ್ ಫೈಲ್ ಚಿತ್ರವು ಸತ್ಯವನ್ನು ಹೊರತಂದಿದೆ. ನಿರ್ದೇಶಕ, ನಿರ್ಮಾಪಕರ ಧೈರ್ಯ ಭಾರತದ ಕಾಶ್ಮೀರದ ಕಣಿವೆಯೊಳಗಿನ ಮಾರಣ ಹೋಮಗಳನ್ನು ಬಯಲಲ್ಲಿ ತಂದು ನಿಲ್ಲಿಸಿದೆ. ಈ ಚಿತ್ರದಲ್ಲಿ ಜನ ಬಯಸುವ ಹೀರೋ, ಹೀರೋಯಿನ್ ಕುಣಿತವಿಲ್ಲ. ಆದರೆ ಅಪ್ಪಟ ನೈಜ ನಟನೆಯ ಮೂಲಕ ಒಂದೊಂದು ಪಾತ್ರವೂ ಅಂತರಾಳದೊಳು ಇಳಿದು ಬಿಡುತ್ತದೆ!! ಇಳಿದು ಹೃದಯ ಚೂರಾಗಿಸುತ್ತದೆ. ಚಿತ್ರದ ಕೊನೆಯಲ್ಲಂತೂ ಇಡೀ ಚಿತ್ರಮಂದಿರವೇ ಸ್ತಬ್ಧ! ಮಾತಾಡಲು ಪದಗಳೇ ಸಿಗದೇ, ಮನಸ್ಸು ಕಾದ ಬಾಣಲೆಯಲ್ಲಿ ಕುದಿಯುತ್ತಿರುವ ಎಣ್ಣೆಯಂತೆ ಕೊತ ಕೊತ ಕುದಿಯಲಾರಂಭಿಸುವುದು. ಪ್ರಜಾಸತ್ತಾತ್ಮಕ ಭಾರತದಲ್ಲಿ ಕಾಶ್ಮೀರಿ ಪಂಡಿತರ ಗೋಳಿನ ಕಥೆಗೆ ಮಾರಣ ಹೋಮವೇ ಅಂತ್ಯವಾಯಿತೇ? ಪ್ರಶ್ನೆಗಳಿಗೆ ನಮ್ಮಲ್ಲಿ ಉಳಿಯುವುದು ಕಣ್ಣೀರ ಧಾರೆ. ಇಂತಹ ಗೊತ್ತಿಲ್ಲದ ಎಷ್ಟೋ ಕಥೆಗಳು ಕಾಶ್ಮೀರದ ಕಣಿವೆಯಲ್ಲಿ ಮಣ್ಣಲ್ಲಿ ಮಣ್ಣಾಗಿ ಹೋಗಿರಬಹುದು. ಎಚ್ಚೆತ್ತು ಕೊಳ್ಳುವ ಸರದಿ ನಮ್ಮದು.

ಈ ಚಿತ್ರವನ್ನು ನಾನು ಇಂದು ನೋಡಿದೆ. ಪ್ರತಿಯೊಬ್ಬ ಭಾರತೀಯನೂ ಈ ಚಿತ್ರ ನೋಡುವಂತಾಗಲಿ. ಪ್ರತಿಯೊಂದು ಸಂಪರ್ಕಕ್ಕೂ ಇದನ್ನು ಕಳಿಸಿ.

ಖಂಡಿತಾ ತಪ್ಪದೇ ಈ ಚಿತ್ರ ವೀಕ್ಷಿಸಿ. ನೀವು ಮಾತ್ರವಲ್ಲ, ನಿಮ್ಮ ಕುಟುಂಬ, ಬಳಗದವರು, ಗೆಳೆಯ, ಗೆಳತಿಯರು ಹೀಗೆ ಎಲ್ಲರೂ ಈ ಚಿತ್ರ ವೀಕ್ಷಿಸುವಂತೆ ಮಾಡಿ. ಆ ಮೂಲಕ ಕಾಶ್ಮೀರ್ ಫೈಲ್ ನಲ್ಲಿ ಅಡಗಿದ ಸತ್ಯ ಭಾರತೀಯರೆಲ್ಲರಿಗೂ ಅರಿವಾಗಲಿ. ಭಾರತದ ಯಾವ ರಾಜ್ಯವೂ ಇಂತಹ ಇನ್ನೊಂದು ಕಾಶ್ಮೀರವಾಗದಿರಲಿ

ಬೋಲೋ ಭಾರತ್ ಮಾತಾ ಕೀ ಜೈ...ವಂದೇ ಮಾತರಂ



**- ಮಂಜುಳಾ ಪ್ರಸಾದ್,**
ಸರಸ್ವತಿ ನಗರ, ದಾವಣಗೆರೆ.

## ವಿಲ್ ಪವರ್ ಬರಲು ದಿಲ್ ಪವರ್ ಅಗತ್ಯ

### ಮಲೇಬೆನ್ನೂರು : ವಿದ್ಯಾರ್ಥಿಗಳಿಗೆ ಅಕ್ಷರ ದಾಸೋಹ ಅಧಿಕಾರಿ ರಾಮಕೃಷ್ಣ ಕಿವಿಮಾತು



ಮಲೇಬೆನ್ನೂರು, ಮಾ.15- ವಿದ್ಯಾರ್ಥಿಗಳಿಗೆ ವಿಲ್ ಪವರ್ ಬರಲು ದಿಲ್ ಪವರ್ ಅಗತ್ಯವಿದೆ ಎಂದು ಹರಿಹರ ತಾಲ್ಲೂಕು ಅಕ್ಷರ ದಾಸೋಹದ ಅಧಿಕಾರಿ ರಾಮಕೃಷ್ಣ ಅಭಿಪ್ರಾಯಪಟ್ಟರು.

ಬಿಳಸನೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಬೆಂಗಳೂರಿನ ಇಂಡಿಯಾ ಸುಧಾರ್ ಟ್ರಸ್ಟ್ ಶಾಲೆಗೆ ನೀಡಿದ ಗಣಕ ಯಂತ್ರ, ಪೆನ್ ಹಾಗೂ ಗ್ರಂಥಾಲಯ ಪುಸ್ತಕಗಳನ್ನು ವಿತರಿಸಿ ಅವರು ಮಾತನಾಡಿದರು.

ಶಿಕ್ಷಣ ಅಪರೂಪದ ವಸ್ತುವಾಗಿದ್ದು, ಸರ್ಕಾರಿ ಶಾಲೆಯಲ್ಲಿ ಊಟ, ಮಾತ್ರೆ, ಹಾಲು, ಬಟ್ಟೆ, ಪುಸ್ತಕ, ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುತ್ತಿದ್ದು, 10 ವರ್ಷಗಳು ಓದಿ ನಂತರ ಶಿಸ್ತು, ಮನೋಧರ್ಮ, ಶ್ರಮದ ಕಾರ್ಯ ನಡೆಸಿದರೆ ಯಶಸ್ಸು ದೊರಕುತ್ತದೆ ಎಂದರು.

ಸುಹಾಸ್ ಯತಿರಾಜ್ ಡಿಸಿ ಆದರೂ ಪ್ಯಾರಾ ಓಲಿಂಪಿಕ್‌ಲ್ಲಿ ಬಂಗಾರ ಪಡೆದರು, ಕೆಂಪ ಹೊನ್ನಯ್ಯ ಅಂಧನಾಗಿ ಬ್ರೈಲ್‌ಲಿಪಿಯಲ್ಲಿ ಅಭ್ಯಾಸದಿಂದ ಐಎಎಸ್ ತೇರ್ಗಡೆಯಾಗಿದ್ದಾರೆ. ಶಕ್ತಿಶಾಲಿ ವ್ಯಕ್ತಿತ್ವ ಇರೋದು ವ್ಯಕ್ತಿಯ ಬೆಳವಣಿಗೆಗೆ, ಸರಳ ಜೀವನ ಸಾಧಿಸುವ ತಾಕತ್ತು ಗ್ರಾಮದಲ್ಲಿದೆ ಎಂದು ರಾಮಕೃಷ್ಣ ಹೇಳಿದರು.

ಟ್ರಸ್ಟ್ ಪದಾಧಿಕಾರಿ ವಿನೋದ್ ಮರ್‌ಗೋಡ್ ಮಾತನಾಡಿ, ಶಾಲಾ ಶಿಸ್ತು ಕಂಡು ವಸ್ತು ನೀಡಲು ಬಯಸಿದ್ದೇವೆ. ಮನಸ್ಸಲ್ಲಿ ನಂಬಿಕೆ ಇರಬೇಕು, ಪರಿಶ್ರಮದಲ್ಲಿ ನಂಬಿಕೆಯಿದ್ದರೆ ಜೀವನಪೂರ್ಣ ಯಶಸ್ಸು ದೊರಕುತ್ತದೆ ಎಂದರು.

ಕನ್ನಡ ಹೋರಾಟಗಾರ ಎಕ್ಕೆಗೊಂದಿಯ ಹೆಚ್.ಬಿ.ರುದ್ರಗೌಡ ಮಾತನಾಡಿ, ಸರ್ಕಾರಿ ಶಾಲೆಯಲ್ಲಿ ವಿಶೇಷ ಆಲೋಚನೆಯಲ್ಲಿ ಶ್ರಮಪಟ್ಟರೆ ಮಕ್ಕಳಿಗೆ ಸರ್ಕಾರಿ ನೌಕರಿ ದೊರಕಲು ಅಸಾಧ್ಯವೇನಲ್ಲ ಎಂದರು.

ಮುಖ್ಯ ಶಿಕ್ಷಕ ಕೆ.ಆರ್.ವಿಶ್ವನಾಥ್ ಅಧ್ಯಕ್ಷತೆ ವಹಿಸಿದ್ದರು. ರಾಘವೇಂದ್ರ, ಗ್ರಾಮದ ದಾನಿ, ಗ್ರಾ.ಪಂ ಸದಸ್ಯ ಎ.ರಾಜಣ್ಣ, ಹನುಮಂತ ರೆಡ್ಡಿ, ಮಂಜುನಾಥ ರೆಡ್ಡಿ, ಶಿಕ್ಷಕರಾದ ಬಸವರಾಜಪ್ಪ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್‌ಕುಮಾರ್ ಹೆಗಡೆ ಹಾಜರಿದ್ದರು. ಅನುಸೂಯ ಪ್ರಾರ್ಥಿಸಿದರು. ಶಿಕ್ಷಕ ಪಿ.ಹೆಚ್.ನಾಗರಾಜ್ ಸ್ವಾಗತಿಸಿದರು.

## ದುರ್ಗಾಂಬಿಕ ದೇವಿ ಜಾತ್ರೆ ದೇವಿಗೆ ನಮನ

ದುರ್ಗೆ ದುರ್ಗೆ ದುರ್ಗಾ ಮಾತೆ
ಕೂಗಿ ಕರೆವೆ ನಿನ್ನಾ ಕಾರುಣ್ಯ ಮೂರ್ತೆ
ಬಾಗಿ ನಮಿಪೆ ನಿನ್ನಾ ಚರಣಕೆ ಪ್ರೀತೆ
ನಗರದಲ್ಲಿ ನಿನ್ನಾ ಮಹಿಮೆಗಾಥೆ

ಊರಿನಲ್ಲಿ ನಿನ್ನಾ ಗುಣಗಾನ
ನೀನಿರುವುದೇ ಇಲ್ಲಿ ಸಮ್ಮಾನ
ಬೇಡುವ ಭಕ್ತರಿಗೆ ನೀಡುವೆ ವರದಾನ
ಬೇರಾರಿಲ್ಲ ನಿನ್ನಾ ಸಮಾನ

ಶಕ್ತಿದೇವತೆಯು ನೀನಮ್ಮ
ಭಕ್ತಿಗೆ ಒಲಿವೆ ನೀನಮ್ಮ
ನಿನಗೆ ಇಷ್ಟವೆಂದು ಬಲಿ ಕೊಡುವರಮ್ಮ
ನಿನಗೆ ಅಹಿಂಸೆ ಪ್ರಿಯವೆಂದು ತಿಳಿಯದೇನಮ್ಮ

ಸರ್ವರ ತಪ್ಪನು ಮನ್ನಿಸಮ್ಮ
ಮಕ್ಕಳ ತಪ್ಪು ತಾಯಿ ಎಣಿಸುವಳೇ ಅಮ್ಮ
ದಾವಣಗೆರೆ ಜನತೆಗೆ ನೀನೇ ಸರ್ವಸ್ವವಮ್ಮ
ಸರ್ವಾಧಿದೇವತೆ ನೀ ಕಾಪಾಡಮ್ಮ

**- ಕೋಮಲ ವಿ. ಕುಮಾರ್**, ದಾವಣಗೆರೆ.

## ಮಲೇಬೆನ್ನೂರು : ಬಸ್ ನಿಲ್ದಾಣದಲ್ಲಿ ಬೇಕರಿ ನಿರ್ಮಾಣಕ್ಕೆ ವಿರೋಧ



ಮಲೇಬೆನ್ನೂರು, ಮಾ.15- ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬೇಕರಿ ಕಟ್ಟಡ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದ ಘಟನೆ ಮಂಗಳವಾರ ನಡೆಯಿತು. ಆದರೂ ನಿರ್ಮಾಣ ಕೆಲಸವನ್ನು ಅಧಿಕಾರಿಗಳು ಮುಂದುವರೆಸಿದ್ದಾರೆ. 15x20 ಅಳತೆಯ ಜಾಗವನ್ನು ಬೇಕರಿ ಸ್ಟಾಲ್ ನಿರ್ಮಾಣಕ್ಕೆ ಕೆಎಸ್‌ಆರ್‌ಟಿಸಿ ಅನುಮತಿ ನೀಡಿದೆ.

ಆದರೆ, ಆ ಜಾಗದಲ್ಲಿ ಬೇಕರಿ ಇದ್ದರೆ ಜನರು ಬೇಕರಿಗೆ ಹೋಗಿ ಬರುವಾಗ ಅಪಘಾತ ಸಂಭವಿಸುವ ಸಾಧ್ಯತೆ ಇದೆ ಎಂದು ಪಾಳೇಗಾರ್ ನಾಗರಾಜ್ ಅಭಿಪ್ರಾಯಪಟ್ಟಿದ್ದಾರೆ.

ಬಸವೇಶ್ವರ ದೇವಸ್ಥಾನದಿಂದ 1 ಎಕರೆ ಜಾಗವನ್ನು ಬಸ್ ನಿಲ್ದಾಣಕ್ಕೆ ನೀಡಲಾಗಿತ್ತು. ಬಸ್ ನಿಲ್ದಾಣದ ಹಿಂಭಾಗದ ಜಾಗವನ್ನು ಒತ್ತುವರಿ ಮಾಡಿದ್ದಾರೆ. ಆ ಜಾಗವನ್ನು ಬಿಡಿಸಿಕೊಳ್ಳದ ಕೆಎಸ್‌ಆರ್‌ಟಿಸಿ ಇರುವ ಸ್ವಲ್ಪ ಜಾಗದಲ್ಲಿ ವಾಣಿಜ್ಯ ಮಳಿಗೆ ಮಾಡಲು ಹೊರಟಿದೆ ಎಂದು ನಾಗರಾಜ್ ದೂರಿದ್ದಾರೆ.

## ಕೊಂಡಜ್ಜಿ ಶಾಲೆಗೆ ಸೆಟಪ್ ಬಾಕ್ಸ್ ಕೊಡುಗೆ



ದಾವಣಗೆರೆ, ಮಾ.15- ಕೊಂಡಜ್ಜಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಹರಿಹರ ತಾಲ್ಲೂಕು ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ಕೆ. ಜಯಶ್ರೀ ಸಹಶಿಕ್ಷಕರು ದಾನವಾಗಿ ಶಾಲೆಗೆ ಸ್ಮಾರ್ಟ್ ಕ್ಲಾಸ್ ಸಿಸ್ಟಮ್‌ಗೆ ಸೆಟಪ್ ಬಾಕ್ಸನ್ನು ನೀಡಿರುತ್ತಾರೆ. ಇವರಿಗೆ ಶಾಲೆಯ ಎಸ್‌ಡಿಎಂಸಿ ಸಮಿತಿಯವರು, ಶಾಲಾ ಸಿಬ್ಬಂದಿ ವರ್ಗದವರು ಹಾಗೂ ಇಲಾಖೆಯವರು ಅಭಿನಂದನೆ ಸಲ್ಲಿಸಿದರು.

## ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

**ಹರಪನಹಳ್ಳಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಹರಪನಹಳ್ಳಿ ವಿಜಯನಗರ ಜಿಲ್ಲೆ**
**ನೋಂದಣಿ ಸಂಖ್ಯೆ : ವೈ.ನಂ: 266: 1929-30**

ನಮ್ಮ ಸಂಘದ ಆಸ್ತಿ ಡೋರ್ ನಂ. 35,36,37,38 ಮತ್ತು 40 ಮುಖ್ಯ ರಸ್ತೆ, ಗೌಳೇರ ಪೇಟೆ ಸಂಘದ ಮಳಿಗೆಗಳನ್ನು ಮತ್ತು ಗ್ರೌಂಡ್ ಫ್ಲೋರ್‌ನಲ್ಲಿ 5 ವ್ಯಾಪಾರಿ ಮಳಿಗೆಗಳನ್ನು 12'x21.5' ಅಡಿ ಅಳತೆಯ ಮಳಿಗೆಗಳನ್ನು ಮತ್ತು ಸಂಘದ ಆಸ್ತಿ ಡೋರ್ ನಂ.39 ರ ಪೈಕಿ ಮುಖ್ಯ ರಸ್ತೆ, ಗೌಳೇರ ಪೇಟೆ ಸಂಘದ ಕಛೇರಿ ಪೂರ್ವಕ್ಕೆ ಹೊಂದಿಕೊಂಡಿರುವ 5 ವ್ಯಾಪಾರಿ ಮಳಿಗೆಗಳ ಮೇಲಂತಸ್ತಿನ ಮೊದಲನೇ ಮಹಡಿಯಲ್ಲಿ 8 ವ್ಯಾಪಾರಿ ಮಳಿಗೆಗಳನ್ನು ನಿರ್ಮಿಸಲಾಗುವುದು. ಈ ಬಗ್ಗೆ ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರ ಪತ್ರದಂತೆ ಮತ್ತು ದಿನಾಂಕ 14.3.2022ರಂದು ನಡೆದ ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಸದರಿ ಮಳಿಗೆಗಳನ್ನು ನಿರ್ಮಿಸಲು ಬಾಡಿಗೆಗೆ ಪಡೆಯಲು ಇಚ್ಛೆಯುಳ್ಳವರಿಂದ ಬಡ್ಡಿ ರಹಿತ ಠೇವಣಿ ಪಡೆದು ನಿರ್ಮಿಸಲು ಮತ್ತು ಬಾಡಿಗೆ ನಿಗದಿ ಮಾಡಿಕೊಳ್ಳಲು ಬಹಿರಂಗ ಹರಾಜು ಮೂಲಕ ಹರಾಜು ಕರೆಯಲು ತೀರ್ಮಾನಿಸಲಾಗಿದೆ. ಅದರಂತೆ ಈ ಮಳಿಗೆಗಳನ್ನು ಬಾಡಿಗೆಗೆ ಪಡೆಯಲು ಇಚ್ಚಿಸಿದವರು ಸ್ಥಳ ಪರಿಶೀಲಿಸಿಕೊಂಡು ಸಂಘದ ಸೂಚನಾ ಫಲಕದಲ್ಲಿ ನಕಾಶೆಗಳನ್ನು ಮತ್ತು ಷರತ್ತುಗಳನ್ನು ಪರಿಶೀಲಿಸಿಕೊಂಡು ಈ ಕೆಳಕಂಡ ಷೆಡ್ಯೂಲ್ ಪ್ರಕಾರ ಬಹಿರಂಗ ಹರಾಜಿನಲ್ಲಿ ಷರತ್ತುಗಳಿಗೆ ಒಳಪಟ್ಟು ಭಾಗವಹಿಸಕ್ಕದ್ದು.

### ಮಳಿಗೆಗಳ ವಿವರ

| ಕ್ರ.ಸಂ | ನಿರ್ಮಿಸುವ ಮಳಿಗೆಗಳ ವಿವರ | ಅಳತೆ (1 ಮಳಿಗೆ) | ನಿಗದಿತ ಬಡ್ಡಿ ರಹಿತ ಠೇವಣಿ (ಡೆಪಾಸಿಟ್) (1 ಮಳಿಗೆಗೆ) | ಬಾಡಿಗೆ ನಿಗದಿ ಕನಿಷ್ಠ (1 ಮಳಿಗೆಗೆ) | ಟೆಂಡರ್ ಠೇವಣಿ |
|---|---|---|---|---|---|
| 01 | ಕಛೇರಿ ಪಶ್ಚಿಮಕ್ಕೆ ಹೊಂದಿಕೊಂಡಿರುವ ಸೆಲ್ಲರ್ 05 ಮಳಿಗೆಗಳು ಪಶ್ಚಿಮದಿಂದ 1, 2, 3, 4, 5 | 12'x21.5 | 800000.00 | 9000.00 | 10000.00 |
| 02 | ಕಛೇರಿ ಪಶ್ಚಿಮಕ್ಕೆ ಹೊಂದಿಕೊಂಡಿರುವ ಸೆಲ್ಲರ್ ಮೇಲೆ ಮೊದಲನೇ ಮಹಡಿಯ 05 ಮಳಿಗೆಗಳು ಪಶ್ಚಿಮದಿಂದ 1, 2, 3, 4, 5 | 12'x21.5 | 900000.00 | 11000.00 | 10000.00 |
| 03 | ಕಛೇರಿ ಪೂರ್ವಕ್ಕೆ ಹೊಂದಿಕೊಂಡಿರುವ ವ್ಯಾಪಾರಿ ಮಳಿಗೆಗಳ ಮೇಲಂತಸ್ತಿನ ಮೊದಲನೇ ಮಹಡಿಯಲ್ಲಿ 8 ವ್ಯಾಪಾರಿ ಮಳಿಗೆಗಳು | 24'x12.1' | 625000.00 | 5000.00 | 10000.00 |

**ಷರತ್ತುಗಳು:** 1. ಮೇಲ್ಕಂಡ ಕ್ರಮ ಸಂಖ್ಯೆ 01 ಮತ್ತು 02 ರ ಮಳಿಗೆಗಳ ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ದಿನಾಂಕ: 22.03.2022ನೇ ಮಂಗಳವಾರ ಸಮಯ ಬೆಳಿಗ್ಗೆ 10.30 ರೊಳಗಾಗಿ ಮತ್ತು ಕ್ರಮ ಸಂಖ್ಯೆ 3ರ ಮಳಿಗೆಗಳ ಬಹಿರಂಗ ಹರಾಜಿನಲ್ಲಿ ಭಾಗಹಿಸುವವರು ಮಧ್ಯಾಹ್ನ 12.30ರೊಳಗಾಗಿ ಪ್ರತ್ಯೇಕ ಹರಾಜು ಫೀ 1000.00 ರೂ.ಗಳನ್ನು ಹಾಗೂ ಹರಾಜು ಠೇವಣಿ ರೂ.10000.00 ಗಳನ್ನು ಪಾವತಿ ಮಾಡಿ ರಶೀದಿ ಪಡೆದು ಭಾಗವಹಿಸತಕ್ಕದ್ದು.

2. ಮೇಲ್ಕಂಡ ಕ್ರಮ ಸಂಖ್ಯೆ 01 ಮತ್ತು 02 ರ ಮಳಿಗೆಗಳ ಬಹಿರಂಗ ಹರಾಜನ್ನು ದಿನಾಂಕ: 22.03.2022ನೇ ಮಂಗಳವಾರ ಸಮಯ ಬೆಳಿಗ್ಗೆ 11.00 ಕ್ಕೆ ಮತ್ತು ಕ್ರಮ ಸಂಖ್ಯೆ 3ರ ಮಳಿಗೆಗಳ ಬಹಿರಂಗ ಹರಾಜನ್ನು ಸದರಿ ದಿನಾಂಕದಂದು ಮಧ್ಯಾಹ್ನ 1.00 ಗಂಟೆಗೆ ಹಾಜರಿದ್ದ ಹರಾಜುದಾರರ ಸಮ್ಮುಖದಲ್ಲಿ ನಡೆಸಲಾಗುವುದು.

3. ಹೆಚ್ಚಿನ ಮಾಹಿತಿಗಾಗಿ ಸಂಘದ ಕಛೇರಿ ವೇಳೆಯಲ್ಲಿ ಭೇಟಿ ನೀಡಿ ಮಾಹಿತಿ ಪಡೆಯತಕ್ಕದ್ದು ಮತ್ತು ಷರತ್ತುಗಳನ್ನು ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಿದೆ. ತಾವು ಪರಿಶೀಲಿಸಿಕೊಳ್ಳತಕ್ಕದ್ದು.

ಸ್ಥಳ : ಹರಪನಹಳ್ಳಿ
ದಿನಾಂಕ : 14.03.2022

ಸಹಿ/-
ಶ್ರೀ ಹಾಲೇಶನಾಯ್ಕ ಎಲ್.ಬಿ.,
ಅಧ್ಯಕ್ಷರು, ಟಿ.ಎ.ಪಿ.ಸಿ.ಎಂ.ಎಸ್. ಹರಪನಹಳ್ಳಿ
ಮೊ. ನಂ. 99011 15807

ಸಹಿ/-
ಶ್ರೀಮತಿ ಮಂಜುಳಾ ಎಸ್.
ಪ್ರಧಾನ ಕಾರ್ಯದರ್ಶಿ, ಟಿ.ಎ.ಪಿ.ಸಿ.ಎಂ.ಎಸ್. ಹರಪನಹಳ್ಳಿ
ಮೊ.ನಂ. 63626 22433

## ಸೇವಾಲಾಲ್ ದೇವಸ್ಥಾನ ಕಾಮಗಾರಿಗೆ ಸಹಾಯಧನ ವಿತರಣೆ



**ರಾಣೇಬೆನ್ನೂರು**

ರಾಣೇಬೆನ್ನೂರು,ಮಾ.15- ಕಾಕೋಳ ಗ್ರಾಮ ಪಂಚಾಯತಿ ವ್ಯಾಪ್ತಿಯ ವೆಂಕಟಾಪುರ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ನೂತನ ಶ್ರೀ ಸೇವಾಲಾಲ್ ದೇವಸ್ಥಾನದ ಕಾಮಗಾರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಂಜೂರಾದ 1.50 ಲಕ್ಷದ ಡಿಡಿಯನ್ನು ಕಮಿಟಿಯ ಸದಸ್ಯರಿಗೆ ಯೋಜನೆಯ ಜಿಲ್ಲಾ ನಿರ್ದೇಶಕ ನಾಗರಾಜ ಶೆಟ್ಟಿ ವಿತರಣೆ ಮಾಡಿದರು.

## ಮರೆಯಾಗುತ್ತಿರುವ ಮನುಷ್ಯ ಸಂಬಂಧಗಳು




**ವಾಸುದೇವ ರಾಯ್ಕರ್ ವಿಷಾದ**

ದಾವಣಗೆರೆ, ಮಾ.15- ಜನರು ಮೊಬೈಲ್, ಟಿವಿ, ಕಂಪ್ಯೂಟರ್‌ಗಳಲ್ಲಿ ಹೆಚ್ಚು ಹೆಚ್ಚು ತಲ್ಲೀನರಾಗುತ್ತಿದ್ದು, ಮನುಷ್ಯ ಸಂಬಂಧಗಳು ಮರೆಯಾಗುತ್ತಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ ಎಂದು ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್ ಬೇಸರ ವ್ಯಕ್ತ ಪಡಿಸಿದರು.


ನಗರದ ಎವಿಕೆ ಕಾಲೇಜಿನಲ್ಲಿ ಲಯನ್ಸ್ ಕ್ಲಬ್ ಹಾಗೂ ಕೆಡಿಲಾ ಕಂಪನಿ (ಹುಬ್ಬಳ್ಳಿ) ಇವರ ಸಹಯೋಗದೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಮೂಳೆ ಸಾಂದ್ರತಾ ಪರೀಕ್ಷೆ ಹಾಗೂ ಮಹಿಳಾ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಂದು ಮನೆಗಳಲ್ಲೂ ದೊಡ್ಡವರಿಂದ ಚಿಕ್ಕವರಾದಿಯಾಗಿ ಟಿ.ವಿ., ಮೊಬೈಲ್ ಗೀಳಿಗೆ ಈಡಾಗುತ್ತಿದ್ದಾರೆ. ನೆರೆಹೊರೆಯವರೊಂದಿಗೆ ಮಾತನಾಡುವುದಿರಲಿ, ಮನೆಯವರೊಂದಿಗೆ ಒಂದೆಡೆ ಕುಳಿತು ಮಾತನಾಡುವುದು ಸಹ ಕಡಿಮೆಯಾಗುತ್ತಿದೆ. ಇದರಿಂದ ಭಾವನಾತ್ಮಕ ಸಂಬಂಧಗಳು ಇಲ್ಲವಾಗುತ್ತಿದ್ದು, ಇದು ಮುಂದೆ ಎಲ್ಲಿಗೆ ಹೋಗಿ ತಲುಪುವುದೋ ಗೊತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಆರ್‌ಸಿಹೆಚ್ ಡಾ. ಮೀನಾಕ್ಷಿ ಮಾತನಾಡಿ, ಒಂದು ಕಾಲದಲ್ಲಿ ಹೆಣ್ಣು ಮಕ್ಕಳನ್ನು ಓದಿಸುವುದು ಕಷ್ಟವಾಗಿತ್ತು. ಎಷ್ಟೇ ಓದಿದರೂ ಮನೆಗೆಲಸ ಮಾಡುವುದು ಹೆಣ್ಣು ಮಕ್ಕಳಿಗೆ ತಪ್ಪಿದ್ದಲ್ಲ ಎನ್ನುವ ಮಾತಿತ್ತು. ಆದರೆ ಇಂದು ಮಹಿಳೆಯರು ಎಲ್ಲಾ ರಂಗಗಳಲ್ಲೂ ಸಾಧನೆ ತೋರುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಮುಖ್ಯ. ಇಂದು ಶಿಕ್ಷಣ ವ್ಯಾಪಾರೀಕರಣವಾಗಿರುವುದು ದುರಂತದ ವಿಷಯ. ಎಲ್ಲರೂ ಇಂಜಿನಿಯರ್, ವೈದ್ಯಕೀಯ ರಂಗಕ್ಕೆ ಸೇರಬೇಕಿಲ್ಲ. ಅನೇಕ ದಾರಿಗಳಿದ್ದು, ಯಾವುದೇ ವೃತ್ತಿ ಇರಲಿ ಅದರಲ್ಲಿ ಯಶಸ್ವಿಯಾಗುವುದು ಮುಖ್ಯ ಹಾಗೂ ವೃತ್ತಿಯಲ್ಲಿ ಸಾರ್ಥಕತೆ ಪಡೆಯಬೇಕು ಎಂದರು.

ಪೊಲೀಸ್ ವೃತ್ತ ನಿರೀಕ್ಷಕರಾದ ತೇಜಾವತಿ ಮಾತನಾಡಿ, ಸಂಚಾರಿ ನಿಯಮಗಳ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.

ಈ ವೇಳೆ ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ, ಎವಿಕೆ ಕಾಲೇಜು ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್, ಸನ್ಮಾನಿತರಾದ ಕೆ. ಶಿಲ್ಪ, ಮಾಲಾಪ್ರಸಾದ್, ದೇವಿಕ ಸುನೀಲ್, ತೇಜಸ್ವಿನಿ ಪ್ರಕಾಶ್, ನಳಿನ, ಶಿಲ್ಪ ವೀರೇಶ್, ಡಾ. ಪಿ.ಎಂ. ಅನುರಾಧ, ಪ್ರೊ. ಜಿ.ಸಿ. ನೀಲಾಂಬಿಕಾ, ಪ್ರೊ. ಪ್ರಭಾವತಿ ವೇದಿಕೆಯಲ್ಲಿದ್ದರು.



ಮಹಿಷಾಸುರ ಮರ್ಧಿನಿ ಅಮ್ಮ



ದೇವಸ್ಥಾನದ ಗೇಟ್ ಮುಂದೆ ಗಣ್ಯ ವ್ಯಕ್ತಿಗಳು ದರ್ಶನಕ್ಕಾಗಿ ನಿಂತಿರುವುದು



ಅಮ್ಮನ ನೇರ ದರ್ಶನ ದೊರೆತಾಗ ಮೂಡಿದ ಧನ್ಯತಾಭಾವ !



ದೀಡು ನಮಸ್ಕಾರ ಹಾಕುತ್ತಿರುವ ಹಿರಿಯರ ಜೊತೆಗೆ ಪುಟ್ಟ ಮಕ್ಕಳು



ಬೇವಿನುಡಿಗೆಯಲ್ಲಿ ಬಾಲಕಿ



ದೇವಸ್ಥಾನದ ಸುತ್ತ ಸ್ವಚ್ಛತೆಗೆ ನಿಯೋಜಿತವಾಗಿರುವ ಪಾಲಿಕೆ ಸಿಬ್ಬಂದಿ.

# ಆಸ್ತಿ ತೆರಿಗೆ ವಂಚನೆ ಮಾಡಿದ ಸ್ಥಳೀಯ ಸಂಸ್ಥೆಗಳ ವಿರುದ್ಧ ಕ್ರಮ

ಬೆಂಗಳೂರು, ಮಾ. 15 - ಆಸ್ತಿ ತೆರಿಗೆ ವಂಚನೆ ಪ್ರಕರಣದಲ್ಲಿ ಲೋಪ ಮಾಡಿದ ಸ್ಥಳೀಯ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜ್ ಹೇಳಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಶಾಸಕ ಡಾ.ಕೆ.ಗೋವಿಂದರಾಜ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮೂರು ವರ್ಷಗಳಲ್ಲಿ ಪೌರಸಭೆ ಅಧಿನಿಯಮದ ಪ್ರಕಾರ ರಾಜ್ಯದಲ್ಲಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ 2018-19ರಲ್ಲಿ 711.18 ಕೋಟಿ ರೂ., 2019-20ರಲ್ಲಿ 736.77 ಕೋಟಿ ರೂ., 2020-21ರಲ್ಲಿ 841.72 ಕೋಟಿ ರೂ. ತೆರಿಗೆ ಸಂಗ್ರಹವಾಗಿದೆ. ಸ್ವಯಂ ಆಸ್ತಿ ತೆರಿಗೆ ಪದ್ಧತಿಯ ಪ್ರಕಾರವೇ ಆಸ್ತಿ ತೆರಿಗೆ ನಿಗದಿ ಮಾಡಲಾಗುತ್ತಿದೆ ಎಂದರು.


ಪೌರಸಭೆಗಳ ಅಧಿನಿಯಮದ ಅಡಿ ವಾಣಿಜ್ಯ ಕಟ್ಟಡಗಳಿಗೆ ಕನಿಷ್ಠ 0.5ರಿಂದ ಶೇ.3ರಷ್ಟು, ವಸತಿ ಮತ್ತು ವಾಣಿಜ್ಯೇತರ ಕಟ್ಟಡಗಳಿಗೆ ಶೇ.0.2 ರಿಂದ 1.5ರಷ್ಟು, ಖಾಲಿ ನಿವೇಶನಗಳಿಗೆ ಶೇ. 0.2.ರಿಂದ 0.5ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಕೈಗಾರಿಕೆಗಳ ವಾಣಿಜ್ಯ ಕಟ್ಟಡಗಳಿಗೆ ನಿಗದಿ ಪಡಿಸುವ ಆಸ್ತಿ ತೆರಿಗೆ ದರದ ಶೇ.70ರಷ್ಟು ಕಡಿಮೆ ಇಲ್ಲದಂತೆ ಆಸ್ತಿ ತೆರಿಗೆ ವಿಧಿಸಲು ಅವಕಾಶ ನೀಡಲಾಗಿದೆ. ಸರ್ಕಾರವೇ ಆಸ್ತಿ ತೆರಿಗೆಯ ಪ್ರಮಾಣವನ್ನು ನಿರ್ಧರಿಸುತ್ತದೆ. ಕೆಲವು ಕಡೆ ಆಸ್ತಿ ತೆರಿಗೆಯಲ್ಲಿ ವಂಚನೆಯಾಗಿರುವುದು ಕಂಡು ಬಂದಿದೆ. ತಪ್ಪು ಮಾಡಿದ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಹೇಳಿದರು.

ಸ್ಥಿರಾಸ್ತಿ ಗುರುತಿನ ಸಂಖ್ಯೆ (ಪಿಐಡಿ) ನಂಬರ್ ಆಧಾರದಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ನಿಗದಿ ಪಡಿಸಲಾಗುತ್ತಿದೆ. ಇ-ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ತೆರಿಗೆ ಪಾವತಿಸಲು ಅವಕಾಶ ನೀಡಲಾಗಿದೆ ಎಂದು ಹೇಳಿದರು.

# ಕುಂಬಳೂರಿನಲ್ಲಿ ಹನುಮಂತ ದೇವರ ತೇರು

ಮಲೇಬೆನ್ನೂರು ಬಳಿಯ ಕುಂಬಳೂರಿನ ಶ್ರೀ ಹನುಮಂತ ದೇವರ ರಥೋತ್ಸವವು ದಿನಾಂಕ 19ರ ಶನಿವಾರ ಜರುಗಲಿದೆ. ಇಂದು ರಾತ್ರಿ ರಥಕ್ಕೆ ಕಂಕಣ ಧಾರಣೆ ಮಾಡಲಾಯಿತು. ನಾಳೆ ದಿನಾಂಕ 16ರ ಬುಧವಾರ ರಾತ್ರಿ 9.30 ಕ್ಕೆ ಗಿಣಿ ಉತ್ಸವ ನಡೆಯಲಿದೆ.

# ಗ್ರಾಮೀಣ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷರಾಗಿ ಬೆಳ್ಳೂಡಿ ನಾಗೇಂದ್ರಪ್ಪ



**ಹರಿಹರ**

ಮಲೇಬೆನ್ನೂರು, ಮಾ. 15- ಹರಿಹರ ತಾಲ್ಲೂಕು ಗ್ರಾಮೀಣ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘವನ್ನು ಅಸ್ತಿತ್ವಕ್ಕೆ ತರಲಾಗಿದ್ದು, ಸಂಘದ ನೂತನ ಅಧ್ಯಕ್ಷರಾಗಿ ಬೆಳ್ಳೂಡಿಯ ಕೆ. ನಾಗೇಂದ್ರಪ್ಪ ಅವರನ್ನು ಆಯ್ಕೆ ಮಾಡಲಾಯಿತು.

ಗೌರವ ಸಲಹೆಗಾರರಾಗಿ ಭಾನುವಳ್ಳಿ ಭೀಮಣ್ಣ, ಕೆ.ಎನ್. ಹಳ್ಳಿಯ ವಿ. ನಾಗೇಂದ್ರಪ್ಪ, ಉಪಾಧ್ಯಕ್ಷರಾಗಿ ದೇವರಬೆಳಕೆರೆಯ ಎಸ್.ಎಸ್. ಗಣೇಶ್, ಭಾನುವಳ್ಳಿಯ ವೀರಯ್ಯಸ್ವಾಮಿ, ಕಾರ್ಯದರ್ಶಿಯಾಗಿ ಕೊಕ್ಕನೂರಿನ ಡಿ.ಕೆ. ರಾಜು, ಸಹ ಕಾರ್ಯದರ್ಶಿಯಾಗಿ ಕೆ.ಎನ್. ಹಳ್ಳಿಯ ಎನ್.ವಿ. ಮಹೇಂದ್ರ, ಖಜಾಂಚಿಯಾಗಿ ಹರಳಹಳ್ಳಿಯ ಡಿ.ಕೆ. ನಿಂಗಪ್ಪ, ಸಂಘಟನಾ ಕಾರ್ಯದರ್ಶಿಯಾಗಿ ಎಳೆಹೊಳೆಯ ಬಿ. ನಾಗರಾಜ್ ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಜಿಲ್ಲಾ ಸಂಘದ ಪ್ರತಿನಿಧಿ ರಮೇಶ್ ಜೆ. ವತನ್ ಅಧ್ಯಕ್ಷತೆಯಲ್ಲಿ ಈ ಆಯ್ಕೆ ನಡೆಯಿತು. ಈ ವೇಳೆ ಪತ್ರಿಕಾ ವಿತರಕರಿಗೆ ರಾಜೇಶ್ವರಿ ಜೆ. ವತನ್ ನ್ಯೂಟ್ರಿಷನ್ ಇವರು ಹೆಲ್ತ್ ಟಿಪ್ಸ್ ನೀಡಿದರು.

# ಕರ್ನಾಟಕ ಬ್ಯಾಂಕ್ ಶಾಖೆ ಉದ್ಘಾಟನೆ

ಕರ್ನಾಟಕ ಬ್ಯಾಂಕ್‌ನ ಶಾಖೆ ಉದ್ಘಾಟನೆಯು ಇಂದು ಬೆಳಿಗ್ಗೆ 10.30ಕ್ಕೆ ನೂತನ ಕಾಲೇಜು ರಸ್ತೆಯ ವಿದ್ಯಾನಗರದಲ್ಲಿ ನಡೆಯ ಲಿದೆ. ಮಹಾಂತೇಶ್ ಬೀಳಗಿ ಶಾಖೆ ಉದ್ಘಾಟಿಸಲಿದ್ದು, ಶಾಖೆ ಮ್ಯಾನೇಜರ್ ರಮೇಶ್, ಸಹಾಯಕ ವ್ಯವಸ್ಥಾಪಕ ಹಯವದನ ಉಪಾಧ್ಯಾಯ ಪಾಲ್ಗೊಳ್ಳಲಿದ್ದಾರೆ.

# ಜಿಗಳಿ : ಇಂದು ರಂಗನಾಥ ಸ್ವಾಮಿ ತೇರು

ಶ್ರೀ ರಂಗನಾಥ ಸ್ವಾಮಿಯ ರಥೋ ತ್ಸವ ಇಂದು ತಡರಾತ್ರಿ (ಗುರುವಾರ ಬೆಳಗಿನ ಜಾವ) ಜರುಗಲಿದೆ.

ಇಂದು ಬೆಳಿಗ್ಗೆ 8 ಗಂಟೆಗೆ ಗಜ ಉತ್ಸವ, ಸಂಜೆ 4 ಗಂಟೆಗೆ ಶಸ್ತ್ರ ಕಾರ್ಯಕ್ರಮ ನಡೆಯ ಲಿದ್ದು, ಇದೇ ದಿನ ತಡರಾತ್ರಿ ಶ್ರೀ ರಂಗನಾಥಸ್ವಾಮಿ ರಥೋತ್ಸವವು ಯಲವಟ್ಟಿ ಮತ್ತು ಜಿ. ಬೇವಿನ ಹಳ್ಳಿ ಗ್ರಾಮಗಳ ಶ್ರೀ ಆಂಜ ನೇಯ ಸ್ವಾಮಿಗಳು ಹಾಗೂ ಗ್ರಾಮದ ಬೀರಲಿಂಗೇಶ್ವರ ಸ್ವಾಮಿಯ ಸಮ್ಮುಖದಲ್ಲಿ ಜರುಗಲಿದೆ.

ದಿನಾಂಕ 17ರ ಗುರುವಾರ ಬೆಳಿಗ್ಗೆ 10.30 ಕ್ಕೆ ಜವಳ, ಮುದ್ರೆ, ಸಂಜೆ ಓಕಳಿಯ ನಂತರ ಕಂಕಣ ವಿಸರ್ಜನೆ ಕಾರ್ಯಕ್ರಮ.

ದಿನಾಂಕ 18 ರ ಶುಕ್ರವಾರ ಬೆಳಿಗ್ಗೆ ವಿವಿಧ ಕಾರ್ಯಕ್ರಮಗಳ ನಂತರ ಸಂಜೆ 7.30 ರಿಂದ ದೇವರುಗಳ ಸಮ್ಮುಖದಲ್ಲಿ ಭೂತನ ಸೇವೆ ಮತ್ತು ಉತ್ಸವ ನಡೆಯಲಿದೆ. ದಿನಾಂಕ 22ರ ಮಂಗಳವಾರ ಶ್ರೀ ಚೌಡಮ್ಮ ದೇವಿಯ ಹಬ್ಬವಿರುತ್ತದೆ.

# ರಸೀದಿ ಪಡೆದು ಕಾನೂನು ಬದ್ಧ ಗ್ರಾಹಕರಾಗಬೇಕು

## ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಹೆಚ್.ಎನ್. ಮೀನಾ ಕರೆ



ದಾವಣಗೆರೆ, ಮಾ. 15 - ಗ್ರಾಹಕರು ಯಾವುದೇ ವಸ್ತು ಖರೀದಿಸಿದಾಗ ರಶೀದಿ ಪಡೆಯಬೇಕು. ರಸೀದಿ ಪಡೆಯುವುದರಿಂದ ಅನ್ಯಾಯಕ್ಕೊಳಗಾದ ಸಂದರ್ಭದಲ್ಲಿ ಕಾನೂನಿನ ಮೂಲಕ ರಕ್ಷಣೆ ಪಡೆಯಬಹುದು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಹೆಚ್.ಎನ್. ಮೀನಾ ತಿಳಿಸಿದ್ದಾರೆ.

ಜಿಲ್ಲಾಡಳಿತ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಗ್ರಾಹಕರ ದಿನಾಚರಣೆ ಹಾಗೂ ನ್ಯಾಯಬೆಲೆ ಅಂಗಡಿಗಳ ರೂಪಾಂತರ ಮತ್ತು ಸಬಲೀಕರಣ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸರಕು ಖರೀದಿ ವೇಳೆ ರಸೀದಿ ಪಡೆದಾಗ ಮಾತ್ರ ಕಾನೂನು ಬದ್ಧ ಗ್ರಾಹಕರಾಗಲು ಸಾಧ್ಯ ಮತ್ತು ಕಾನೂನಿನ ಮೂಲಕ ರಕ್ಷಣೆ ಪಡೆಯಲು ಸಾಧ್ಯ ಎಂದ ಅವರು, ಹತ್ತಿಪ್ಪತ್ತು ರೂಪಾಯಿಗಳ ವಂಚನೆ ಆಗಿದೆ ಎಂದು ನಿರ್ಲಕ್ಷ್ಯ ಮಾಡಬಾರದು. ಆಯೋಗದ ಎದುರು ಕೇವಲ 3 ರೂ. ಹೆಚ್ಚು ಪಡೆದ ಕಾರಣಕ್ಕಾಗಿ ದೂರು ಸಲ್ಲಿಸಿದ ಉದಾಹರಣೆಗಳಿವೆ ಎಂದು ತಿಳಿಸಿದರು.

ಸರಕು ಹಾಗೂ ಸೇವೆಗಳನ್ನು ಪಡೆಯುವಾಗ ಪಕ್ಕಾ ಬಿಲ್ ಪಡೆಯುವುದರಿಂದ, ಗ್ರಾಹಕರು ಮೋಸದಿಂದ ರಕ್ಷಣೆ ಪಡೆಯುವ ಜೊತೆಗೆ ಆರ್ಥಿಕತೆಯೂ ಸಬಲವಾಗುತ್ತದೆ ಎಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರವೀಣ್ ನಾಯಕ್ ಮಾತನಾಡಿ, ಯಾವುದೇ ವಸ್ತುಗಳನ್ನು ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಗ್ರಾಹಕರು ಇದರ ಕುರಿತು ಹೆಚ್ಚಿನ ಜ್ಞಾನ ಪಡೆಯಬೇಕಾಗಿದೆ. ಆನ್‌ಲೈನ್ ಶಾಪಿಂಗ್ ವ್ಯವಸ್ಥೆಗೆ ಸಂಬಂಧಿಸಿದಂತೆ ಇನ್ನಷ್ಟು ಬಿಗಿಯಾದ ಕಾನೂನು ಜಾರಿಗೆ ತರುವ ಅವಶ್ಯಕತೆ ಇದೆ ಎಂದರು.

ಟ್ರೈನರ್ ಲೈಫ್ ಕೋಚ್‌ನ ಡಾ.ಶೃತಿ ಪಿ ಮಾತನಾಡಿದರು. ಈ ಸಂದರ್ಭದಲ್ಲಿ ಆಹಾರ ಇಲಾಖೆ ಜಂಟಿ ನಿರ್ದೇಶಕ ಮಂಟೆಸ್ವಾಮಿ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯ ಸಿ.ಎಸ್.ತ್ಯಾಗರಾಜನ್ , ಕಾನೂನು ಮಾಪನ ಶಾಸ್ತ್ರ ಇಲಾಖೆ ಸಹಾಯಕ ನಿಯಂತ್ರಕ ಹೆಚ್.ಎಸ್ ರಾಜು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ನಿವೃತ್ತ ವ್ಯವಸ್ಥಾಪಕ ಪಿ.ಅಂಜಿನಪ್ಪ, ಆಹಾರ, ನಾಗರಿಕ ಸರಬರಾಜು ಇಲಾಖೆಯ ಸಹಾಯಕ ನಿರ್ದೇಶಕ ಬಿ.ಟಿ ಪ್ರಕಾಶ್ ಉಪಸ್ಥಿತರಿದ್ದರು.

## ನಿಮಗ್ಯಾರು ಉಚಿತ ಅಕ್ಕಿ ಕೊಡು ಅಂದಿದ್ರು?

ಸರ್ಕಾರ ಅಂತ್ಯೋದಯ, ಅನ್ನಭಾಗ್ಯ ಮುಂತಾದ ಹೆಸರಿನ ಯೋಜನೆಗಳಡಿ ಉಚಿತವಾಗಿ ಅಕ್ಕಿ ನೀಡುತ್ತಿದೆ. ಆದರೆ, ಈ ಅಕ್ಕಿಯನ್ನು ಹಲವರು ಮಾರಿಕೊಳ್ಳುತ್ತಿದ್ದಾರೆ. ಈ ಅಕ್ಕಿ ಪಾಲಿಶ್ ಮಾಡಿ ಇನ್ನು ಕೆಲವರು ಮಹಲ್ ಮೇಲೆ ಮಹಲ್ ಕಟ್ಟಿಕೊಳ್ಳುತ್ತಿದ್ದಾರೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ವಿಷಾದಿಸಿದ್ದಾರೆ. ಈ ರೀತಿ ಮಾರಿಕೊಳ್ಳುತ್ತಿರುವವರಿಗೆ ಅಂತರಾತ್ಮ ಇಲ್ಲವಾ? ಎಂಬ ಪ್ರಶ್ನೆ ಮುಂದಿಟ್ಟ ಜಿಲ್ಲಾಧಿಕಾರಿ, ಮುಂದೊಂದು ದಿನ 'ನಿಮಗ್ಯಾರು ಉಚಿತ ಅಕ್ಕಿ ಕೊಡು ಅಂದಿದ್ರು' ಎಂದು ಜನರು ತಮ್ಮ ಕೃತ್ಯದ ಸಮರ್ಥನೆಗೂ ಮುಂದಾಗಬಹುದು ಎಂದು ಜಿಲ್ಲಾಧಿಕಾರಿ ಅಭಿಪ್ರಾಯ ಪಟ್ಟರು. ಆಟೋದಲ್ಲಿ ರೇಷನ್ ಅಕ್ಕಿ ಅಂತ ಕೂಗಿ ಕೂಗಿ ಖರೀದಿಸುತ್ತಿದ್ದಾರೆ. ಇವರು ಪ್ರತಿದಿನ ಸಾವಿರ ರೂ.ಗಳವರೆಗೆ ಗಳಿಸುತ್ತಿದ್ದಾರೆ. ಬಾಡಿಗೆ ಆಟೋ ಓಡಿಸಿದರೂ ಬರದಷ್ಟು ದುಡ್ಡು ಅಕ್ಕಿಯಿಂದ ಬರುತ್ತಿದೆ. ಸರ್ಕಾರದ ಉಚಿತ ಅಕ್ಕಿಯನ್ನು 12-16 ರೂ.ಗಳಿಗೆ ಖರೀದಿಸಲಾಗುತ್ತಿದೆ. ಅಂತಿಮವಾಗಿ ಪಾಲಿಶ್ ಆದ ನಂತರ ಇದೇ ಅಕ್ಕಿ ಕೆಜಿಗೆ 30-35 ರೂ.ಗಳಿಗೆ ಮಾರಾಟವಾಗುತ್ತಿದೆ ಎಂಬುದು ಕಹಿ ವಾಸ್ತವ ಎಂದವರು ಹೇಳಿದರು.ಕೆಲ ಪಡಿತರ ಅಂಗಡಿಯವರು ಚಾಪುಡಿ ಇತ್ಯಾದಿ ಖರೀದಿಸಿದರೆ ಮಾತ್ರ ಉಚಿತ ಅಕ್ಕಿ ಕೊಡುವುದಾಗಿ ಹೇಳುತ್ತಿದ್ದಾರೆ. ಇದು ಸತ್ಯವೇ? ಎಂದು ಜಿಲ್ಲಾಧಿಕಾರಿ ಪ್ರಶ್ನಿಸಿದಾಗ, ಸಭೆಯಲ್ಲಿದ್ದ ಪಡಿತರ ಅಂಗಡಿಯವರು ಇಲ್ಲ ಎಂದರು. ಇದನ್ನು ಒಪ್ಪದ ಜಿಲ್ಲಾಧಿಕಾರಿ, 'ಇಲ್ಲಾಂತಂದ ರೇನು? ಅದಾವು' ಎಂದು ಹೇಳಿದರು.

# ನಗರವನ್ನು ಸದಾ ಚೊಕ್ಕಟವಾಗಿಡಲು ಸಹಕರಿಸಿ



**ಓದುಗರ ಪತ್ರ**

**ಮಾನ್ಯರೇ,**

ನಗರದ ಗ್ರಾಮದೇವತೆ ದುರ್ಗಾಂಬಿಕಾ ದೇವಿ ಜಾತ್ರೆ ನಡೆಯುವ ದೇವಸ್ಥಾನದ ಸುತ್ತ ಮುತ್ತಲಿನ ವಾತಾವರಣ ಹೀಗಿದೆ.

ಪ್ರತಿನಿತ್ಯ ಲಕ್ಷಗಟ್ಟಲೇ ಜನ ನಮ್ಮಗ್ರಾಮ ದೇವತೆ ದುರ್ಗಾಂಬಿಕಾ ದೇವಿ ದರ್ಶನಕ್ಕೆ ಬರುತ್ತಾರೆ. ನಿತ್ಯವೂ ಸಾಕಷ್ಟು ಕಸ, ಗಲೀಜು ಆಗುತ್ತಿದ್ದು, ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು, ಆರೋಗ್ಯ ವಿಭಾಗ, ಸ್ವಚ್ಛತಾ ವಿಭಾಗ, ಕಾರ್ಪೊರೇಶನ್, ವಾರ್ಡಿಗೆ ಸಂಬಂಧಪಟ್ಟ ಕಾರ್ಪೊರೇಟರ್, ದೇವಸ್ಥಾನ ಟ್ರಸ್ಟ್ ಹಾಗೂ ನಮ್ಮ ಶಾಸಕರು, ಲೋಕಸಭಾ ಸದಸ್ಯರು, ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿ ಯಾರೂ ಕೂಡ ಇದರ ಬಗ್ಗೆ ಜಾಗೃತಿ ವಹಿಸಿಲ್ಲ.

ಪ್ರತಿ ವರ್ಷ ಜಾತ್ರೆ ಸಮಯದಲ್ಲಿ ಅಲ್ಲಿ ಏನಾಗುತ್ತಿದೆ ಎಂದು ಜನಪ್ರತಿನಿಧಿಗಳಾಗಲೀ, ಸರ್ಕಾರದ ಅಧಿಕೃತ ಸಿಬ್ಬಂದಿಗಳಾಗಲೀ ಸ್ವಚ್ಛತೆ ಬಗ್ಗೆ ಗಮನ ಹರಿಸುವುದಿಲ್ಲ. ಅಷ್ಟೇ ಅಲ್ಲ 24 ಘಂಟೆ ಪೊಲೀಸ್ ಸೆಕ್ಯೂರಿಟಿ ಇದ್ರೂ ಪೊಲೀಸರು ಕೂಡ ಈ ವಿಷಯ ಕುರಿತು ಕಾಳಜಿ ವಹಿಸಲ್ಲ. ಪಾಲಿಕೆ ಹೆಲ್ತ್ ಇನ್‌ಸ್ಪೆಕ್ಟರ್, ನಗರಪಾಲಿಕೆ ಆಯುಕ್ತರು ಈ ಕಡೆ ಗಮನ ವಹಿಸಿಲ್ಲ.

ಯಾಕೆ? ಇದು ಅವರ ಜವಾಬ್ದಾರಿ ಅಲ್ವಾ, ಕರ್ತವ್ಯ ಅಲ್ವಾ, ಎಲ್ಲ ಸರ್ಕಾರಿ ಅಧಿಕಾರಿಗಳು ತಮ್ಮ ಕರ್ತವ್ಯ ಸರಿಯಾಗಿ ನಡೆಸುವ ಜವಾಬ್ದಾರಿಯಲ್ಲವೇ? ಜನಗಳು ಆ ಒಂದು ಗಲೀಜಿನಲ್ಲಿ ನಿಂತುಕೊಂಡು, ಹತ್ತು ಹಲವಾರು ರೋಗಗಳಿಗೆ ಬಲಿಯಾಗಿ ಸಾಯಬೇಕಾ?


**ಕರ್ತವ್ಯ ಮತ್ತು ಜವಾಬ್ದಾರಿ :** ಜಿಲ್ಲಾಡಳಿತ ಹಾಗು ಮಹಾ ನಗರಪಾಲಿಕೆ, ಇತ್ತ ಗಮನ ಹರಿಸಿ, ಜಾತ್ರೆ ಮುಗಿಯುವವರೆಗೆ ಸಾರ್ವಜನಿಕ ಆರೋಗ್ಯ ಮತ್ತು ಕಲ್ಯಾಣದ ಬಗ್ಗೆ ನಿಗಾವಹಿಸಬೇಕು. ನಿತ್ಯವು ಪ್ರತಿ ಘಂಟೆಗೆ ಒಮ್ಮೆ ಕಸ ಗುಡಿಸಿ, ಸ್ವಚ್ಛತೆ ಕಾಪಾಡಬೇಕು ಎಂದು ನಾನು ಈ ಮೂಲಕ ಮನವಿ ಮಾಡುತ್ತೇನೆ. ಈ ವಿಷಯದ ಕುರಿತು ಬೇಗನೇ ಕ್ರಮ ಜರುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

**- ಶ್ರೀಮತಿ ವಸುಂಧರಾ ಜೆ.ಸಿ.**
ವಕೀಲರು, ದಾವಣಗೆರೆ

# ಚುನಾವಣಾ ವೈಫಲ್ಯ : 5 ರಾಜ್ಯಗಳ ಕಾಂಗ್ರೆಸ್ ಮುಖ್ಯಸ್ಥರ ರಾಜೀನಾಮೆ


ನವದೆಹಲಿ, ಮಾ. 15 – ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಮುಖಭಂಗ ಎದುರಾಗಿರುವ ಹಿನ್ನೆಲೆಯಲ್ಲಿ ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಗೋವಾ ಹಾಗೂ ಮಣಿಪುರ ರಾಜ್ಯಗಳ ಕಾಂಗ್ರೆಸ್ ಅಧ್ಯಕ್ಷರು ರಾಜೀನಾಮೆ ನೀಡುವಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ತಿಳಿಸಿದ್ದಾರೆ. ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ನಡೆದ ಎರಡು ದಿನಗಳ ನಂತರ ಪಂಜಾಬ್‌ನ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಸೇರಿದಂತೆ ಐವರ ರಾಜೀನಾಮೆಗೆ ಸೂಚನೆ ನೀಡಲಾಗಿದೆ.

ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಸಿಧು, ಉತ್ತರಾಖಂಡದ ಅಧ್ಯಕ್ಷ ಗಣೇಶ್ ಗೊಡಿಯಾಳ್ ಹಾಗೂ ಮಣಿಪುರ ಕಾಂಗ್ರೆಸ್ ಅಧ್ಯಕ್ಷ ಲೊಕೆನ್ ಸಿಂಗ್ ಅವರನ್ನು ನೇಮಿಸಲಾಗಿತ್ತು. ಗೋವಾ ಘಟಕದ ಗಿರೀಶ್ ಚೊಡನ್‌ಕರ್ ಹಾಗೂ ಉತ್ತರ ಪ್ರದೇಶದ ಅಜಯ್ ಕುಮಾರ್ ಲಲ್ಲು ರಾಜೀನಾಮೆ ನೀಡಲು ತಿಳಿಸಲಾಗಿದೆ. ರಾಜ್ಯ ಕಾಂಗ್ರೆಸ್ ಘಟಕಗಳನ್ನು ಪುನರ್‌ರಚಿಸಲಾಗುವುದು. ಸಂಘಟನೆಯಲ್ಲಿ ಬದಲಾವಣೆ ತರುವ ಮೂಲಕ ಪಕ್ಷ ಬಲಪಡಿಸಲಾಗುವುದು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಈ ನಡುವೆ, ನಾಯಕತ್ವ ಬದಲಾವಣೆಗೆ ಒತ್ತಾಯಿಸುತ್ತಿರುವ ಜಿ-23 ಬಣದ ನಾಯಕರು ಬುಧವಾರ ಸಭೆ ನಡೆಸಲಿದ್ದಾರೆ. ಈ ಸಭೆಯಲ್ಲಿ ಪಾಲ್ಗೊಳ್ಳುವಂತೆ ಬಣದ ಸದಸ್ಯರಲ್ಲದ ಕೆಲವರಿಗೂ ಆಹ್ವಾನ ನೀಡಲಾಗಿದೆ.

ಸರ್ವರಿಗೂ ನಗರ ದೇವತೆ ದುರ್ಗಾಂಬಿಕ ದೇವಿ ಜಾತ್ರಾ ಮಹೋತ್ಸವದ ಶುಭಾಶಯಗಳು...

ನಲ್ಲೂರು ಶಾಂತಾರಾಮ್ಸ್ ಜ್ಯೂಯಲರ್ಸ್



# 690, ಮಂಡಿಪೇಟೆ, ದಾವಣಗೆರೆ-577 001.

ನಮ್ಮಲ್ಲಿ 916 ಗೋಲ್ಡ್ ಜ್ಯೂಯಲರ್ಸ್, ಡೈಮಂಡ್ಸ್ ಜ್ಯೂಯಲರ್ಸ್, ನವರತ್ನ ಸ್ಟೋನ್ಸ್ ಸಿಲ್ವರ್ ಆರ್ಟಿಕಲ್ಸ್ ದೊರೆಯುತ್ತವೆ.



ನಲ್ಲೂರು ಎಸ್. ರಾಘವೇಂದ್ರ,
ಮೊ. :94494 46306, 08192 200400



ಹೃದಯಪೂರ್ವಕ ಅಭಿನಂದನೆಗಳು



ಹರಿಹರದ ಪ್ರತಿಷ್ಠಿತ ಶ್ರೀ ಹರಿಹರೇಶ್ವರ
ಅರ್ಬನ್ ಕೋ -ಆಪರೇಟಿವ್ ಬ್ಯಾಂಕ್
ಆಡಳಿತ ಮಂಡಳಿ ಅಧ್ಯಕ್ಷರಾಗಿ
ಅವಿರೋಧವಾಗಿ ಆಯ್ಕೆಯಾಗಿರುವ
ನಾಮದೇವ ಸಿಂಪಿ ಸಮಾಜದ
ಮುಖಂಡರೂ, ವಕೀಲರೂ,
ನಮ್ಮ ಆತ್ಮೀಯರೂ ಆದ
**ಶ್ರೀ ಪರಶುರಾಮ್ ಅಂಬೇಕರ್**
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.



ವಿಠ್ಠಲ ರಾಕುಂಡೆ
ಭವಾನಿ ಸ್ಯಾರಿ ಸೆಂಟರ್,
ಇಸ್ಲಾಂ ಪೇಟೆ, ದಾವಣಗೆರೆ.




ಎಂ.ಎಸ್. ವಿಠ್ಠಲ್
ಅಧ್ಯಕ್ಷರು, ನಾಮದೇವ ಸಿಂಪಿ ಸಮಾಜ, ದಾವಣಗೆರೆ.
ಮಾಜಿ ಮಹಾಪೌರರು, ಮಹಾನಗರ ಪಾಲಿಕೆ ದಾವಣಗೆರೆ.



www.sparshhospital.com

SPARSH HOSPITAL
THE TOUCH OF LIFE

ಹೆಮಟಾಲಜಿ ಕ್ಲಿನಿಕ್



ಡಾ. ಮಹೇಶ್ ರಾಜಶೇಖರಯ್ಯ
MBBS, MD (Internal Medicine), DM (Clinical Haematology),
MRCP (The UK), Fellowship in BMT & Leukemia (Vancouver)
**Head of Haematology and Bone Marrow Transplant Department**

ಈ ಕೆಳಗಿನ ಕಾಯಿಲೆಗಳಿಂದ ನರಳುತ್ತಿರುವವರು

- ಅನೀಮಿಯಾ, ರಕ್ತದ ಹೆಚ್ಚಳ, ಕಡಿಮೆ ಹಾಗೂ ಅಧಿಕ ಪ್ಲೇಟ್ಲೆಟ್ ಕೌಂಟ್, ಕಡಿಮೆ ಹಾಗೂ ಅಧಿಕ ಬಿಳಿ ರಕ್ತಕಣಗಳ ಕೌಂಟ್, ಲ್ಯೂಕೇಮಿಯಾ, ಲಿಂಫೋಮ, ಮಲ್ಟಿಪಲ್ ಮೈಲೋಮ, ರಕ್ತಸ್ರಾವ ಮತ್ತು ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆಗಳು
- ಮಕ್ಕಳಲ್ಲಿ ಕಂಡುಬರುವ ಎಲ್ಲಾ ರೀತಿಯ ಹೆಮಟೋಲೊಜಿ ಸಮಸ್ಯೆಗಳು (ಥಲಸ್ಸೆಮಿಯ ಸೇರಿದಂತೆ), ರಕ್ತಸ್ರಾವದ ಸಮಸ್ಯೆಗಳು, ರಕ್ತಹೆಪ್ಪುಗಟ್ಟುವಿಕೆಯ ಸಮಸ್ಯೆಗಳು, ಇಮ್ಯುನೊಡಿಫಿಷಿಯನ್ಸಿ ಸಮಸ್ಯೆಗಳು, ಲ್ಯುಕೇಮಿಯಾ, ಲಿಂಫೋಮಾ ಇತರ ಅಂಗಾಂಗಗಳ ಕ್ಯಾನ್ಸರ್ ಹೊಂದಿರುವವರು.
- ಪುನರಾವರ್ತಿತ ಗರ್ಭಪಾತ ಸೇರಿದಂತೆ ಗರ್ಭಿಣಿಯರು ಮಹಿಳೆಯರಲ್ಲಿ ಕಂಡುಬರುವ ಎಲ್ಲಾ ರೀತಿಯ ಹೆಮಟಾಲೋಜಿ ಸಮಸ್ಯೆಗಳು, ಡಿವಿಟಿ, ಅನೀಮಿಯಾ, ಕಡಿಮೆ ಪ್ಲೇಟ್ಲೆಟ್ ಹೊಂದಿರುವವರು, ಮಹಿಳೆಯರಲ್ಲಿ ರಕ್ತಸ್ರಾವದ ಸಮಸ್ಯೆಗಳು, ಲ್ಯುಕೇಮಿಯಾ, ಲಿಂಫೋಮಾ, ಎಪಿ ಎಲ್‌ಎ ಸಿಂಡ್ರೋಮ್.

ನೋಂದಣೆಗಾಗಿ ಕರೆಮಾಡಿ: 89519 91304 / 081922 22292

ದಿನಾಂಕ : ಬುಧವಾರ, 16 ಮಾರ್ಚ್ 2022
ಸ್ಥಳ : ಅನುಗ್ರಹ ಆಸ್ಪತ್ರೆ, ಎಂ ಸಿ ಸಿ, ಬಿ ಬ್ಲಾಕ್, ದಾವಣಗೆರೆ
ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ

ಸೂಚನೆ: ವೈದ್ಯರು ಪ್ರತೀ ತಿಂಗಳ ಮೂರನೇ ಬುಧವಾರ ತಪಾಸಣೆಗೆ ಲಭ್ಯರಿರುತ್ತಾರೆ



ಬಾಪೂಜಿ ವಿದ್ಯಾಸಂಸ್ಥೆ (ರಿ.)





ಬಾಪೂಜಿ ಆಸ್ಪತ್ರೆ ಮತ್ತು ಎಸ್.ಎಸ್. ಆಸ್ಪತ್ರೆಯಲ್ಲಿ
ದಾವಣಗೆರೆ ದುರ್ಗಾಂಬಿಕಾ ಜಾತ್ರೆಯ ಪ್ರಯುಕ್ತ

50 % ರಿಯಾಯಿತಿ ದರಗಳಲ್ಲಿ ಚಿಕಿತ್ಸೆ

ಬಾಪೂಜಿ ಸಮೂಹ ಸಂಸ್ಥೆಯ ಅಡಿಯಲ್ಲಿರುವ ಬಾಪೂಜಿ ಆಸ್ಪತ್ರೆ ಮತ್ತು ಎಸ್.ಎಸ್ ಆಸ್ಪತ್ರೆಯಲ್ಲಿ ದಾವಣಗೆರೆಯ 'ದುರ್ಗಾಂಬಿಕಾ ಜಾತ್ರೆಯ ಪ್ರಯುಕ್ತ" ದಾವಣಗೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಸಾರ್ವಜನಿಕರಿಗೆ 50% ರಿಯಾಯಿತಿ ದರಗಳಲ್ಲಿ ಒಳ ರೋಗಿಗಳಿಗೆ ಎಲ್ಲಾ ವಿಧದ ಚಿಕಿತ್ಸೆಯನ್ನು ನೀಡಲಾಗುವುದು ಮತ್ತು ರೋಗಿಯ ದಾಖಲಾತಿ ಹಾಗು ವಾರ್ಡಿನ ದರಗಳು ಸಂಪೂರ್ಣ ಉಚಿತವಾಗಿರುತ್ತದೆ.
ಈ ವಿನಾಯಿತಿಯು ದಿನಾಂಕ 15.03.2022 ರಿಂದ ದಿನಾಂಕ 28.03.2022ರ ವರೆಗೆ ಇರುತ್ತದೆ. ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕೆಂದು ತಿಳಿಯಪಡಿಸುತ್ತೇವೆ.

## 12-14ರ ಮಕ್ಕಳ ಲಸಿಕೆಗೆ ಮಾರ್ಗಸೂಚಿ

ನವದೆಹಲಿ, ಮಾ. 15 – ನಾಳೆ ಬುಧವಾರದಿಂದ 12-14 ವರ್ಷದ ಮಕ್ಕಳಿಗೆ ಕೊರೊನಾ ಲಸಿಕೆ ನೀಡಲು ಕೇಂದ್ರ ಸರ್ಕಾರ ಮಾರ್ಗಸೂಚಿ ಪ್ರಕಟಿಸಿದೆ. ಈ ವಯೋಮಾನದವರಿಗೆ ಕೊರ್ಬಿವ್ಯಾಕ್ಸ್ ಲಸಿಕೆ ಮಾತ್ರ ನೀಡಲಾಗುವುದು. 28 ದಿನಗಳ ಅಂತರದಲ್ಲಿ ಎರಡು ಡೋಸ್‌ಗಳಲ್ಲಿ ಲಸಿಕೆ ನೀಡಲಾಗುವುದು. ರಾಜ್ಯಗಳಿಗೆ ಮಾರ್ಗಸೂಚಿ ಬಗ್ಗೆ ತಿಳಿಸಲಾಗಿದೆ.

## ಕಾರಾಗೃಹದಲ್ಲಿನ ಬಂಧಿಗಳ ನೇರ ಸಂದರ್ಶನ

ದಾವಣಗೆರೆ, ಮಾ.15- ಪ್ರಸ್ತುತ ಕೋವಿಡ್ ಸೋಕು ಇಳಿಕೆಯಾಗಿರುವುದರಿಂದ ಜಿಲ್ಲಾ ಕಾರಾಗೃಹದಲ್ಲಿನ ಬಂಧಿಗಳನ್ನು ನೋಡಲು ಇದೇ ದಿನಾಂಕ 21 ರಿಂದ ಪುನ ಅವಕಾಶ ನೀಡಲಾಗುತ್ತದೆ ಎಂದು ಜಿಲ್ಲಾ ಕಾರಾಗೃಹದ ಅಧೀಕ್ಷಕರಾದ ಎಲ್. ಭಾಗೀರಥಿ ತಿಳಿಸಿದ್ದಾರೆ. ಬಂಧಿಗಳ ಸಂದರ್ಶನಕ್ಕೆ ಬರುವ ಕುಟುಂಬ ಸದಸ್ಯರು, ಸಂಬಂಧಿಕರು, ಸ್ನೇಹಿತರು ಮತ್ತು ವಕೀಲರು ಮುಂಚಿತವಾಗಿಯೇ ನೋಂದಾಯಿಸಿಕೊಂಡು ನಿಗದಿಪಡಿಸಲಾಗುವ ದಿನ ಮತ್ತು ಸಮಯಕ್ಕೆ ಆಗಮಿಸಬೇಕು. ವಿವರಕ್ಕೆ ಸಂಪರ್ಕಿಸಿ : 08192-254446, 9480806464.

## ಮಹಾಲಕ್ಷ್ಮಿ ಕ್ರೆಡಿಟ್ ಸೊಸೈಟಿಗೆ ಉಜ್ಜನಪ್ಪ ಅಧ್ಯಕ್ಷ,




ದಾವಣಗೆರೆ, ಮಾ. 15- ನಗರದ ಮಹಾಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಎ.ಆರ್. ಉಜ್ಜನಪ್ಪ ಮತ್ತು ಉಪಾಧ್ಯಕ್ಷರಾಗಿ ಹೆಚ್. ಡಿ. ಪ್ರಭುದೇವ ಬೆಳವನೂರು ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಿರ್ದೇಶಕರುಗಳಾಗಿ ಕೆ.ಎನ್. ಶಿವಲಿಂಗಪ್ಪ ಬಾಡಾ, ಎ.ಪಿ. ಷಡಾಕ್ಷರಪ್ಪ ನೇರ್ಲಿಗೆ, ಬಿ.ಬಿ. ರಾಮಚಂದ್ರ, ಬಾಳೆಹೊಲದ ರೇವಣಸಿದ್ದಪ್ಪ ಬಿ.ಎನ್., ಸಿ. ಸುಭಾಶ್, ಟಿ.ಎಂ. ಮುರುಗೇಂದ್ರಯ್ಯ ಹಿರೇತೊಗಲೇರಿ, ಮಮತ ಕೆ.ಎಂ. ವಿಶ್ವನಾಥ್, ಕೆ.ವಿ. ನೇತ್ರಾವತಿ ಜಿ. ಗುರುಮೂರ್ತಿ, ವಿಶೇಷ ಆಹ್ವಾನಿತರಾಗಿ ಶಿವ ಸಹಕಾರಿ ಬ್ಯಾಂಕ್ ನಿವೃತ್ತ ಪ್ರಧಾನ ವ್ಯವಸ್ಥಾಪಕ ಹೆಚ್.ಎಸ್. ಬಸವಂತಪ್ಪ ಇವರುಗಳು ಆಯ್ಕೆಯಾಗಿದ್ದಾರೆ ಎಂದು ಕಾರ್ಯದರ್ಶಿ ಎಸ್. ಬಸವರಾಜ್ ತಿಳಿಸಿದ್ದಾರೆ.

## ಅಣಬೇರಿನಲ್ಲಿ ಮಾರಿಕಾಂಬ ಜಾತ್ರೆ





ದಾವಣಗೆರೆ ತಾಲ್ಲೂಕು ಅಣಬೇರು ಗ್ರಾಮದಲ್ಲಿ ಶ್ರೀ ಮಾರಿಕಾಂಬದೇವಿ ಜಾತ್ರೆ ಅಂಗವಾಗಿ ಇಂದು ಬೆಳಗಿನ ಜಾವ 4.30 ರಿಂದ ಚರುಗ ಹಾಕಲಾಗುವುದು. ಬೆಳಿಗ್ಗೆ 10.30 ರಿಂದ ದೇವಿಗೆ ಹರಕೆ ಪೂರೈಸುವುದು, ಹೊಳೆ ಪೂಜೆ ಹೋಗಿಬಂದು, ದ್ವಾರ ಬಾಗಿಲ ಮುಳ್ಳು ಗದ್ದುಗೆ ತುಳಿಯುವುದು. ರಾತ್ರಿ 10.30ರ ನಂತರ ದೇವಿಯನ್ನು ಗುಡಿ ತುಂಬಿಸುವುದು.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte